ಸಂಪುಟ : 11 ಸಂಚಿಕೆ: 40 ಪುಟ : 4+2 ಬೆಲೆ: 3.00 ಶುಕ್ರವಾರ ಮಾರ್ಚ್ 13 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 40 Pages : 4+2 Price : 3.00 Friday March 13 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಅಡುಗೆ ಅನಿಲ ದರ ಏರಿಕೆಗೆ ಖಂಡನೆ-ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಆಕ್ರೋಶ

# ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಗರಂ



"ಬೆಲೆ ಏರಿಕೆ ಮತ್ತು ಅಡುಗೆ ಅನಿಲ ದರ ಹೆಚ್ಚಳದಿಂದ ಸಾಮಾನ್ಯ ಜನರ ಬದುಕು ಕಷ್ಟವಾಗಿದೆ. ಕೇಂದ್ರ ಸರ್ಕಾರ ಜನರ ಸಂಕಷ್ಟವನ್ನು ಅರ್ಥಮಾಡಿಕೊಂಡು ಕ್ರಮ ಕೈಗೊಳ್ಳಬೇಕು."
– **ಬಿ.ಆರ್. ಯಾವಗಲ್ಲ,** ಮಾಜಿ ಶಾಸಕರು.

"ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ದ್ವಂದ್ವ ನೀತಿಯಿಂದಾಗಿ ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಹೆಚ್ಚಾಗಿ ಜನಸಾಮಾನ್ಯರು ಸಂಕಷ್ಟ ಅನುಭವಿಸುತ್ತಿದ್ದಾರೆ. ಅಡುಗೆ ಅನಿಲ ಪೂರೈಕೆಯಲ್ಲಿಯೂ ಸಮಸ್ಯೆ ಉಂಟಾಗಿ ಜನರಿಗೆ ತೊಂದರೆ ಆಗುತ್ತಿದೆ."
– **ಕೃಷ್ಣಗೌಡ ಪಾಟೀಲ,** ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ.



**■ ವಿಜಯಸಾಕ್ಷಿ ಸುದ್ದಿ, ಗದಗ**

ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಧೋರಣೆಯಿಂದಾಗಿ ಜಾಗತಿಕ ಮಟ್ಟದಲ್ಲಿ ಭಾರತದ ಗೌರವಕ್ಕೆ ಧಕ್ಕೆ ಉಂಟಾಗಿದ್ದು, ಬೆಲೆ ಏರಿಕೆಯಿಂದ ಜನರ ಬದುಕು ಸಂಕಷ್ಟಕ್ಕೀಡಾಗಿದೆ ಎಂದು ಮಾಜಿ ಸಚಿವ ಬಿ.ಆರ್. ಯಾವಗಲ್ಲ ಆಕ್ರೋಶ ವ್ಯಕ್ತಪಡಿಸಿದರು.

ಗದಗ ನಗರದ ಗಾಂಧಿ ಸರ್ಕಲ್‌ನಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಅಡುಗೆ ಅನಿಲ (ಸಿಲಿಂಡರ್) ದರ ಏರಿಕೆಯನ್ನು ಖಂಡಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಹಿಂದಿನ ದಿನಗಳಲ್ಲಿ ಎಲ್ಲಾ ರಾಷ್ಟ್ರಗಳೊಂದಿಗೆ ಸ್ನೇಹ ಸಂಬಂಧ ಇತ್ತು. ಆದರೆ ಇಂದಿನ ಆಡಳಿತದ ವೈಫಲ್ಯದಿಂದಾಗಿ ಭಾರತದ ವಿರುದ್ಧ ಶತ್ರು ರಾಷ್ಟ್ರಗಳ ಸಂಖ್ಯೆ ಹೆಚ್ಚುವಂತಾಗಿದೆ ಎಂದು ಆರೋಪಿಸಿದರು. ವಿದೇಶಾಂಗ ನೀತಿ ಮತ್ತು ಆರ್ಥಿಕ ನೀತಿಗಳು ದುರ್ಬಲವಾಗಿದ್ದು ದೇಶದ ಗೌರವ ಹಾಳಾಗಿದೆ. ಅಂಬಾನಿ ಮತ್ತು ಅದಾನಿ ಮುಂತಾದ ದೊಡ್ಡ ಉದ್ಯಮಿಗಳಿಗೆ ಒಲವು ತೋರಿಸುವ ಮೂಲಕ ಸಾಮಾನ್ಯ ಜನರ ಬದುಕು ಕಷ್ಟಕರವಾಗಿಸಿದೆ ಎಂದು ಅವರು ಟೀಕಿಸಿದರು. ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ದ್ವಂದ್ವ ನೀತಿಯಿಂದಾಗಿ ದೇಶದ ಜನರು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಅಡುಗೆ ಅನಿಲ ಪೂರೈಕೆ ಸಮಸ್ಯೆಯಿಂದ ಜನಸಾಮಾನ್ಯರಿಗೆ ತೊಂದರೆ ಉಂಟಾಗಿದೆ ಎಂದರು.

1) ಕೇಂದ್ರ ಸರ್ಕಾರದ ನೀತಿಗಳಿಂದ ಜನಸಾಮಾನ್ಯರಿಗೆ ತೊಂದರೆ
2) ಮೋದಿ ವಿದೇಶಾಂಗ ನೀತಿಯಿಂದ ಭಾರತದ ಗೌರವಕ್ಕೆ ಧಕ್ಕೆ ಎಂಬ ಆರೋಪ
3) ಅಡುಗೆ ಅನಿಲ (ಸಿಲಿಂಡರ್) ಬೆಲೆ ಏರಿಕೆಯಿಂದ ಜನರ ಸಂಕಷ್ಟ
4) ಮಹಿಳೆಯರಿಂದ ಒಲೆ ಹಚ್ಚಿ ಅಡುಗೆ ಮಾಡಿ ಪ್ರತಿಭಟನೆ

▸▸ 4ನೇ ಪುಟಕ್ಕೆ

## ಮಹಿಳಾ ದಿನಾಚರಣೆ-ಶಾಸ್ತ್ರೀಯ ಸಂಗೀತ ಸಂಭ್ರಮ ನಾಳೆ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಇಲ್ಲಿನ ಸೋಮೇಶ್ವರ ದೇವಸ್ಥಾನದಲ್ಲಿ ಮಾ.14ರಂದು ಸಂಜೆ 5:30ಕ್ಕೆ ಮೈತ್ರಿ-85 ಬಳಗ ಹಾಗೂ ರಾಯಚೂರಿನ ಸದಾನಂದ ಕನವಳ್ಳಿ ಆರ್ಟ್ ಫೌಂಡೇಷನ್ ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್‌ನ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಸದಾನಂದ ಕನವಳ್ಳಿ ಆರ್ಟ್ ಫೌಂಡೇಷನ್‌ನ ಕೆ. ಮಹೇಶ್, ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್‌ನ ನಿಕಟಪೂರ್ವ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಮೈತ್ರಿ-85 ಬಳಗದ ಅಧ್ಯಕ್ಷ ಸುರೇಶ ಚೋಟಗಲ್ಲ ಹಾಗೂ ಕಾರ್ಯದರ್ಶಿ ಮಹಾದೇವ ಪವಾರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗುಲಬರ್ಗಾ ಕೇಂದ್ರೀಯ ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ರೇಣುಕಾ ಎಲ್. ನಾಯಕ ಮಹಿಳಾ ದಿನಾಚರಣೆ ಕುರಿತು ಉಪನ್ಯಾಸ ನೀಡಲಿದ್ದಾರೆ. ನಂತರ ಸರಿತಾ ಮಹೇಶ್ ಹಾಗೂ ವೆಂಕಟೇಶ ಪಾಟೀಲ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಮೈತ್ರಿ-85 ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

### ಸಚಿವ ಡಾ. ಎಚ್.ಕೆ. ಪಾಟೀಲರಿಂದ ಭೂಮಿಪೂಜೆ, ಬಸವರಾಜ ಹೊರಟ್ಟಿ ಘನ ಉಪಸ್ಥಿತಿ

# ಮಾ.15ಕ್ಕೆ ಸೋಮೇಶ್ವರ ದೇವಸ್ಥಾನ ಮಹಾದ್ವಾರ ಕಾಮಗಾರಿಗೆ ಭೂಮಿಪೂಜೆ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಐತಿಹಾಸಿಕ ಪ್ರಸಿದ್ಧ ಶ್ರೀ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿ ಪೂಜೆ ಮಾ.15 ರಂದು ರವಿವಾರ ಮುಂಜಾನೆ 11 ಗಂಟೆಗೆ ದೇವಸ್ಥಾನದ ಪ್ರಾಂಗಣದಲ್ಲಿ ನೆರವೇರಲಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಬೆಂಗಳೂರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಸುಮಾರು 2 ಕೋಟಿ 40 ಲಕ್ಷ ರೂ. ವೆಚ್ಚದಲ್ಲಿ ಉತ್ತರ ಮಹಾದ್ವಾರದ ಮರುನಿರ್ಮಾಣ ಕಾಮಗಾರಿ ನಡೆಯಲಿದೆ.

ಭೂಮಿಪೂಜೆಯ ದಿವ್ಯ ಸಾನಿಧ್ಯವನ್ನು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಲಿದ್ದಾರೆ. ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ ಅವರು ಸಂರಕ್ಷಣಾ



ಕಾಮಗಾರಿಯ ಭೂಮಿಪೂಜೆಯನ್ನು ನೆರವೇರಿಸಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಶಾಸಕ ಡಾ. ಚಂದ್ರು ಲಮಾಣಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಸಂಸದ ಬಸವರಾಜ ಬೊಮ್ಮಾಯಿ, ನಿಗಮ ಮಂಡಳಿ ಅಧ್ಯಕ್ಷ ಜಿ.ಎಸ್. ಪಾಟೀಲ, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ, ವಿಧಾನ ಪರಿಷತ್ ಸದಸ್ಯರುಗಳಾದ ಪ್ರೊ. ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕ ಸಿ.ಸಿ. ಪಾಟೀಲ, ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ ಆಗಮಿಸಲಿದ್ದಾರೆ.

ಇದಲ್ಲದೆ ಸರ್ಕಾರದ ಕಾರ್ಯದರ್ಶಿ ಪ್ರವಾಸೋದ್ಯಮ ಇಲಾಖೆಯ ಡಾ. ಕೆ.ವಿ. ತ್ರಿಲೋಕಚಂದ್ರ, ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಣದೀಪಸಿಂಗ್ ಚೌಧರಿ, ಪ್ರವಾಸೋದ್ಯಮ ಇಲಾಖೆ ಆಯುಕ್ತ ಅಕ್ರಮ್ ಪಾಷಾ, ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮಾಜಿ ಶಾಸಕರುಗಳಾದ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ ಹಾಗೂ ರಾಮಕೃಷ್ಣ ದೊಡ್ಡಮನಿ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು ಎ. ಹಾಗೂ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"ಮೊದಲು ಮಾ.14ರಂದು ನಿಗದಿಯಾಗಿದ್ದ ಕಾರ್ಯಕ್ರಮ ಅನಿವಾರ್ಯ ಕಾರಣಗಳಿಂದ ಮಾ.15ಕ್ಕೆ ಮುಂದೂಡಲಾಗಿದೆ. ಸಾರ್ವಜನಿಕರು ಮತ್ತು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು."
– **ಗುರುರಾಜ ಪಾಟೀಲ ಕುಲಕರ್ಣಿ,** ಅಧ್ಯಕ್ಷರು, ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ.

### ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಅಪರಾಧ ತಡೆ ಹಾಗೂ ಸೈಬರ್ ಕ್ರೈಂ ಜಾಗೃತಿ ವಿಚಾರ ಸಂಕಿರಣ

# ಸೈಬರ್ ಅಪರಾಧಗಳಿಂದ ಎಚ್ಚರಿಕೆ ಅಗತ್ಯ: ಮಾರುತಿ ಜೋಗದಂಡಕರ



"ಸೈಬರ್ ವಂಚನೆಗಳಿಂದ ತಪ್ಪಿಸಿಕೊಳ್ಳಲು ಸಾರ್ವಜನಿಕರು ಜಾಗೃತಿ ವಹಿಸುವುದು ಅತ್ಯವಶ್ಯಕ."
– **ಮಾರುತಿ ಜೋಗದಂಡಕರ,** ಪೊಲೀಸ ಇನ್ಸಪೆಕ್ಟರ್.

**ಸೈಬರ್ ವಂಚನೆ ತಪ್ಪಿಸಲು ಸಲಹೆಗಳು**

1) ಅಪರಿಚಿತ ಲಿಂಕ್ ಅಥವಾ ಎಪಿಕೆ ಫೈಲ್ ಡೌನ್‌ಲೋಡ್ ಮಾಡಬೇಡಿ
2) ಬ್ಯಾಂಕ್ ಖಾತೆ, ಓಟಿಪಿ, ಪಿನ್ ವಿವರ ಹಂಚಿಕೊಳ್ಳಬೇಡಿ
3) ಆನ್‌ಲೈನ್ ಸಾಲ ಅಥವಾ ಟ್ರೇಡಿಂಗ್ ಆಮಿಷಗಳಿಗೆ ಒಳಗಾಗಬೇಡಿ
4) ಸೈಬರ್ ಅಪರಾಧ ದೂರುಗೆ 1930ಗೆ ಕರೆ ಮಾಡಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಆಶ್ರಯದಲ್ಲಿ ಅಪರಾಧ ತಡೆ ಹಾಗೂ ಸೈಬರ್ ಕ್ರೈಂ ಜಾಗೃತಿ ಕುರಿತು ವಿಚಾರ ಸಂಕಿರಣ ಜರುಗಿತು. ಬೆಟಗೇರಿ ಬಡಾವಣೆ ಪೊಲೀಸ ಠಾಣೆಯ ಇನ್ಸಪೆಕ್ಟರ್ ಮಾರುತಿ ಜೋಗದಂಡಕರ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತಮ್ಮ 33 ವರ್ಷದ ಪೊಲೀಸ್ ಸೇವೆಯಲ್ಲಿ ಅನೇಕ ಅಪರಾಧಗಳನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದ ಅವರು, 2022ರಲ್ಲಿ ರಾಷ್ಟ್ರಪತಿ ಚಿನ್ನದ ಪದಕ ಪಡೆದಿರುವುದಾಗಿ ಹೇಳಿದರು.

ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಅಪಘಾತಗಳಲ್ಲಿ ಪ್ರಾಣಾಪಾಯ ತಪ್ಪಿಸಲು ಇದು ಅತ್ಯವಶ್ಯಕ ಎಂದು ತಿಳಿಸಿದರು. ಮನೆಗಳ ಒಳಗೆ ಮತ್ತು ಹೊರಭಾಗದಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸುವುದರಿಂದ ಕಳ್ಳತನ ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಪೊಲೀಸ್ ಕಾನ್‌ಸ್ಟೇಬಲ್ ಎಸ್.ಜಿ. ಹರ್ಲಾಪೂರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ವಂಚನೆ ಹೆಚ್ಚಾಗಿದೆ. ಮೊಬೈಲ್ ಮೂಲಕ ಹಣ ದುಪ್ಪಟ್ಟು ಮಾಡುವ ಆಮಿಷ ನೀಡಿ ಲಿಂಕ್ ಕಳುಹಿಸಿ ಜನರನ್ನು ವಂಚಿಸುತ್ತಿದ್ದಾರೆ. ಅನಧಿಕೃತ ಸಾಲ ಅಪ್ಲಿಕೇಶನ್‌ಗಳನ್ನು ಬಳಸಬಾರದು ಹಾಗೂ ಬ್ಯಾಂಕ್ ಖಾತೆಗಳಿಗೆ ಬಲವಾದ ಪಾಸ್‌ವರ್ಡ್ ಬಳಸಬೇಕು ಎಂದು ತಿಳಿಸಿದರು. ಸೈಬರ್ ಅಪರಾಧಗಳ ಕುರಿತು ದೂರು ನೀಡಲು 1930 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು ಎಂದರು.

ಆರ್.ಎಫ್. ಕಂಠಿ ಮಾತನಾಡಿ, ವಾಟ್ಸಪ್ ಮೂಲಕ ಬರುವ ಕೆವೈಸಿ, ಪಿಎಂ ಕಿಸಾನ್, ಎಪಿಕೆ ಫೈಲ್ ಅಥವಾ ಅಪರಿಚಿತ ಲಿಂಕ್‌ಗಳನ್ನು ಡೌನ್‌ಲೋಡ್ ಮಾಡಬಾರದು. ಅಪರಿಚಿತರಿಗೆ ಬ್ಯಾಂಕಿಂಗ್ ಮಾಹಿತಿ, ಓಟಿಪಿ ಅಥವಾ ಪಿನ್ ಹಂಚಿಕೊಳ್ಳಬಾರದು ಎಂದು ಎಚ್ಚರಿಸಿದರು.

ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಸಂಗಪ್ಪ ಗುಡಿಮನಿ ಅಧ್ಯಕ್ಷತೆ ವಹಿಸಿದ್ದರು.

ಸಿ.ಪಿ.ಐ ದೀರಜ್ ಸಿಂದೆ ಹಾಗೂ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರಾಮನಗೌಡ ಉಪಸ್ಥಿತರಿದ್ದರು. ಸಭೆಯಲ್ಲಿ ವ್ಯಾಪಾರಸ್ಥರು ಹಾಗೂ ಉದ್ಯಮದಾರರು ಭಾಗವಹಿಸಿದ್ದರು.

### ಡಿಸಿ ಕಚೇರಿಗೆ ಬರುವ ಜನರಿಗೇ ಮೂಲಸೌಕರ್ಯಗಳ ಕೊರತೆ!

# ಜಿಲ್ಲಾಧಿಕಾರಿ ಕಚೇರಿಯಲ್ಲಿ ಜನರಿಗೆ ಕುರ್ಚಿ-ನೀರೂ ಇಲ್ಲವೇ?



**■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಂಡ ದೃಶ್ಯ ನಿಜಕ್ಕೂ ದುಃಖಕರವಾಗಿದೆ. ಹಳ್ಳಿ ಹಳ್ಳಿಯಿಂದ ತಮ್ಮ ಸಮಸ್ಯೆಗಳನ್ನು ಇಟ್ಟುಕೊಂಡು ಬರುವ ರೈತರು, ಹಿರಿಯರು, ಮಹಿಳೆಯರು, ವೃದ್ಧರು ಸೇರಿದಂತೆ ಅನೇಕರು ಕಚೇರಿಗೆ ಬಂದರೂ ಅವರಿಗೆ ಕೂರುವುದಕ್ಕೆ ಕುರ್ಚಿಗಳೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಿರುವುದು ಜನರಲ್ಲಿ ಅಸಮಾಧಾನ ಮೂಡಿಸಿದೆ.

ಕಚೇರಿಗೆ ಬಂದಿದ್ದ ಕೆಲ ವಯೋವೃದ್ಧರು ಕುಡಿಯುವ ನೀರಿಗಾಗಿ ತಡಕಾಡುತ್ತಿದ್ದರೆ, ಮತ್ತೊಬ್ಬ ವೃದ್ಧ ಮಹಿಳೆ ಮೊಣಕಾಲಿನ ನೋವಿದ್ದರೂ ಕುರ್ಚಿ ಇಲ್ಲದೆ ನಿಂತುಕೊಂಡೇ ಕಾಯುಬೇಕಾದ

▸▸ 3ನೇ ಪುಟಕ್ಕೆ

"ತೆರಿಗೆ ಕಟ್ಟುವ ನಾಗರೀಕರು, ವೃದ್ಧರು ಮತ್ತು ಮಹಿಳೆಯರು ವಿವಿಧ ಕೆಲಸಗಳಿಗಾಗಿ ಪ್ರತಿದಿನ ಜಿಲ್ಲಾಧಿಕಾರಿಗಳ ಕಚೇರಿಗೆ ಬರುತ್ತಾರೆ. ಅಂತಹ ಸಂದರ್ಭಗಳಲ್ಲಿ ಜನರಿಗೆ ಕೂರುವ ಆಸನಗಳ ವ್ಯವಸ್ಥೆ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಈ ಅವ್ಯವಸ್ಥೆಗಳ ಬಗ್ಗೆ ಜಿಲ್ಲಾಧಿಕಾರಿಗಳು ನಿಗಾ ವಹಿಸಬೇಕು."
– **ರವಿ ಕುಮಾರ್ ತಂಬ್ರಹಳ್ಳಿ,** ಜಿಲ್ಲಾ ಯುವ ಘಟಕದ ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ವಿಜಯನಗರ (ಹೊಸಪೇಟೆ)

# ನಾಳೆ ಅಂತಾರಾಷ್ಟ್ರೀಯ ಈಜುಕೊಳ ಲೋಕಾರ್ಪಣೆ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಅವರ ಪ್ರಸ್ತಾವನೆಯಂತೆ, ಅಖಖ ಅನುದಾನದಡಿ ರೂ. 50 ಕೋಟಿ ವೆಚ್ಚದಲ್ಲಿ ನಿರ್ಮಿತ ನೂತನ ಕ್ರೀಡಾ ಸಂಕೀರ್ಣ ಮತ್ತು ಅಂತರಾಷ್ಟ್ರೀಯ ಮಟ್ಟದ ಈಜುಕೊಳ ಲೋಕಾರ್ಪಣೆ ಕಾರ್ಯಕ್ರಮವನ್ನು ಮಾರ್ಚ್ 14, 2026 ಮಧ್ಯಾಹ್ನ 3:30ಕ್ಕೆ ಧಾರವಾಡ ಕೋರ್ಟ್ ಸರ್ಕಲ್ ಹತ್ತಿರದ ಕ್ರೀಡಾ ಸಂಕೀರ್ಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವು ರೈಲ್ವೆ ವಿಕಾಸ್ ನಿಗಮ ಲಿ., ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆಯಲಿದ್ದು, ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವೀಯ ಕ್ರೀಡಾ ಸಂಕೀರ್ಣವನ್ನು ಉದ್ಘಾಟಿಸಲಿದ್ದಾರೆ. ಜೊತೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಈಜುಕೊಳ ಲೋಕಾರ್ಪಣೆ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ, ಕಾರ್ಮಿಕ ಸಚಿವರು, ಧಾರವಾಡ ಜಿಲ್ಲಾಧಿಕಾರಿ ಸಚಿವ ಸಂತೋಷ ಎಸ್. ಲಾಡ್, ಸಲೀಂ ಅಹ್ಮದ್, ವಿಧಾನ ಪರಿಷತ್ ಮುಖ್ಯ ಸಚೇತಕ, ಅಬ್ಬಯ್ಯ ಪ್ರಸಾದ, ಭರಮಗೌಡ ಅಲಗೌಡ ಕಾಗೆ, ಸೈಯದ್ ಅಜೀಮ್‌ಪೀರ್ ಎಸ್. ಖಾದ್ರಿ, ನಾಗೇಂದ್ರ ಕುಮಾರ್, ಶಿವಲೀಲಾ ವಿನಯ ಕುಲಕರ್ಣಿ ಭಾಗವಹಿಸಲಿದ್ದಾರೆ.

ಹುಬ್ಬಳ್ಳಿ-ಧಾರವಾಡ ಮಹಾ ನಗರಪಾಲಿಕೆ ಮಹಾಪೌರರು ಮತ್ತು ಉಪ ಮಹಾಪೌರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು, ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಹಿರಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

# ನಬಾರ್ಡ್‌ನಿಂದ 16,342 ಕೋಟಿ ರೂ. ಸಾಲ ವ್ಯವಸ್ಥೆ




■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಧಾರವಾಡ ಜಿಲ್ಲೆಗೆ ನಬಾರ್ಡ್ (NABARD) 2026-27 ಹಣಕಾಸು ವರ್ಷಕ್ಕಾಗಿ ರೂ. 16,342.04 ಕೋಟಿ ಸಾಲ ಸಾಮರ್ಥ್ಯವನ್ನು ಅಂದಾಜಿಸಿದ್ದು, ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಾ.10 ರಂದು ನಡೆದ ಬ್ಯಾಂಕ್ ಸಮಾಲೋಚನಾ ಸಭೆಯಲ್ಲಿ ಬಿಡುಗಡೆ ಮಾಡಲಾಗಿದೆ. ಸಾಲದ ಶೇ. 44 ಎಂಎಸ್‌ಎಂಇ ವಲಯ, ಶೇ. 41.5 ಕೃಷಿ ವಲಯ, ಮತ್ತು ಶೇ. 14.5 ಇತರ ಕ್ಷೇತ್ರಗಳು ಸೇರಿವೆ. ಎಂಎಸ್‌ಎಂಇ ವಲಯದ ಹೂಡಿಕೆ ಮೂಲಕ ಗ್ರಾಮೀಣ ಉದ್ಯಮಗಳಿಗೆ ಹೆಚ್ಚಿನ ಉತ್ತೇಜನ, ಕೃಷಿ ವಲಯದಲ್ಲಿ ರೈತರಿಗೆ ಸ್ಥಿರ ಆದಾಯ ಮತ್ತು ಹವಾಮಾನ ಅನುಕೂಲಿತ ಪರಿಹಾರಗಳನ್ನು ನೀಡಲು ವಿಶೇಷ ಗಮನ ಹರಿಸಲಾಗಿದೆ ಎಂದು ಮಯೂರ್ ಕಾಂಬಳೆ, ನಬಾರ್ಡ್ ಎಜಿಎಂ, ವಿವರಿಸಿದರು.

ಕಾರ್ಯಕ್ರಮದಲ್ಲಿ ಬ್ಯಾಂಕ್ ಆಫ್ ಬರೋಡಾ ಉಪಪ್ರಾದೇಶಿಕ ವ್ಯವಸ್ಥಾಪಕ ಅಮರೀಶ್ ಗೌಡ, RBI ಎಜಿಎಂ ಅರುಣ ಕುಮಾರ್, ಧಾರವಾಡ ಎಲ್‌ಡಿಎಂ ಬಸವರಾಜ ಗಡದವರು ಉಪಸ್ಥಿತರಿದ್ದರು.

# ಕಡಲೆ ಖರೀದಿ ಕೇಂದ್ರಕ್ಕೆ ಚಾಲನೆ: ರೈತರಿಗೆ ಸಾಲ ವಿತರಣೆ

■ ವಿಜಯಸಾಕ್ಷಿ ಸುದ್ದಿ, ಅಬ್ಬಿಗೇರಿ

ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘಗಳೆಂದರೆ ರೈತರಿಗೆ ಆರ್ಥಿಕ ನೆರವು, ರಸಗೊಬ್ಬರ, ಬೀಜ ಮತ್ತು ಕೀಟನಾಶಕಗಳನ್ನು ಸುಲಭವಾಗಿ ಒದಗಿಸುವ ಪ್ರಮುಖ ಕೇಂದ್ರಗಳು ಎಂದು ಸಂಘದ ಮಾಜಿ ಅಧ್ಯಕ್ಷ ಶಿದ್ದಪ್ಪ ಹನಮನಾಳ ಹೇಳಿದರು.

ಅಬ್ಬಿಗೇರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ನಡೆಯುತ್ತಿರುವ ಬೆಂಬಲ ಬೆಲೆ ಯೋಜನೆಯಡಿ ಕಡಲೆ ಖರೀದಿ ಹಾಗೂ ರೈತರಿಗೆ ಸಾಲ ವಿತರಣೆ ಸಮಾರಂಭದಲ್ಲಿ ಮಾತನಾಡಿದ ಅವರು, "ಕೃಷಿ ಪತ್ತಿನ ಸಹಕಾರಿ ಸಂಘಗಳು ಸಣ್ಣ ಮತ್ತು ಅತಿಸಣ್ಣ ರೈತರನ್ನು ಸಾಲದ ಸುಳಿಯಿಂದ ರಕ್ಷಿಸುತ್ತವೆ. ಈ ಮೂಲಕ ಆರ್ಥಿಕ ಸೇರ್ಪಡೆ, ಉಳಿತಾಯದ ಪ್ರವೃತ್ತಿ ಮತ್ತು ಕೃಷಿ ಉತ್ಪಾದನೆ ಹೆಚ್ಚಿಸಲು ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ಸಾಲ ಪಡೆದ ರೈತರು ಸಕಾಲದಲ್ಲಿ ಮರುಪಾವತಿಸುವ ಮೂಲಕ ಇತರೆ ರೈತರಿಗೆ ಸಹಾಯ ಮಾಡಬೇಕು ಎಂದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿರುಪಾಕ್ಷಪ್ಪ ಅರ್ಕಸಾಲಿ ಮಾತನಾಡಿ, "ನಾಫೇಡ್ ಬೆಂಬಲ ಬೆಲೆ ಯೋಜನೆಯಡಿ ನೋಂದಣಿಯಾದ ಎಲ್ಲಾ ರೈತರಿಂದ ಕಡಲೆ ಖರೀದಿ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 14 ರೈತರಿಗೆ ಸಾಲ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ

ಅಂದಪ್ಪ ವೀರಾಪೂರ, ನಾಗನಗೌಡ ಚನ್ನಪ್ಪಗೌಡ್ರ (ಉಪಾಧ್ಯಕ್ಷ), ಸುರೇಶ ಬಸವರಡ್ಡೇರ, ಗುರುನಾಥ ಅವರಡ್ಡಿ, ಮಲ್ಲಿಕಾರ್ಜುನ ಯಲ್ಲರಡ್ಡಿ, ಶಿವಪುತ್ರಪ್ಪ ತೆಗ್ಗಿನಕೇರಿ, ಲಕ್ಕೋವ್ವ ಡಂಬಳ, ಸುನೀತಾ ಬಸವರಡ್ಡೇರ, ಈರಪ್ಪ ತಳವಾರ, ಅಂದಪ್ಪ ದ್ವಾಸಲಕೇರಿ ಸೇರಿದಂತೆ ಮತ್ತಿರರು ಭಾಗಿಯಾಗಿದ್ದರು.



# ನಿಧನ

## ಪಂಚಾಕ್ಷರಪ್ಪ ಬಾಳಿಕಾಯಿ



**ಬೆಟಗೇರಿ:** ನಿವೃತ್ತ ಕೃಷಿ ಅಧಿಕಾರಿ, ಬೆಟಗೇರಿ ಬಸವನ ಗುಡಿ ಬಡಾವಣೆಯ ನಿವಾಸಿಯಾಗಿದ್ದ ಪಂಚಾಕ್ಷರಪ್ಪ ರಾಚಪ್ಪ ಬಾಳಿಕಾಯಿ (77) 12-03-2026 ಗುರುವಾರ ದಿವಸ ಮಧ್ಯಾಹ್ನ 1:30ಕ್ಕೆ ನಿಧನರಾದರು.

ಮೃತರು ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಳಗ ಅಗಲಿದ್ದಾರೆ.

### 50ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆ

# ವೀರಭದ್ರೇಶ್ವರ ಮುಂಭಾಗದಲ್ಲಿ 47 ದಿನಗಳ ಉತ್ಖನನ ಕಾರ್ಯ ಮುಕ್ತಾಯ!



■ ವಿಜಯಸಾಕ್ಷಿ ಸುದ್ದಿ, ಗದಗ

ಐತಿಹಾಸಿಕ 101 ಗುಡಿ ಮತ್ತು ಭಾವಿಗಳ ನಗರ ಲಕ್ಕುಂಡಿನಲ್ಲಿ ಭೂಗರ್ಭದಲ್ಲಿ ಅಡಗಿರುವ ಮೌಲ್ಯಯುತ ಪ್ರಾಚ್ಯವೇಷಗಳನ್ನು ಪತ್ತೆ ಹಚ್ಚುವ ಉತ್ಖನನ ಕಾರ್ಯ ಕಳೆದ 47 ದಿನಗಳಿಂದ ವೀರಭದ್ರೇಶ್ವರ ದೇವಸ್ಥಾನ ಮುಂಭಾಗದಲ್ಲಿ ನಡೆಯುತ್ತಿತ್ತು. ಬುಧವಾರ ಈ ಉತ್ಖನನ ಕಾರ್ಯವನ್ನು ಅಧಿಕೃತವಾಗಿ ಮುಕ್ತಾಯಗೊಳಿಸಲಾಯಿತು.

ಜನವರಿ 10ರಂದು ಪ್ರಾರಂಭವಾದ ಉತ್ಖನನ ಕಾರ್ಯದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು, ಮೈಸೂರು ಪರಂಪರೆ ಇಲಾಖೆ ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳು ಸಂಯುಕ್ತವಾಗಿ ಕೆಲಸ ನಡೆಸಿದವು. ಸುಮಾರು 14 ಅಡಿ ಆಳದಲ್ಲಿ 10*10 ಅಳತೆಯ 4 ಬಾಕ್ಸ್‌ಗಳನ್ನು ತಯಾರಿಸಿ, 30-35 ಕಾರ್ಮಿಕರು 47 ದಿನಗಳ ಕಾಲ ಉತ್ಖನನ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಉತ್ಖನನದ ಫಲಿತಾಂಶವಾಗಿ 50ಕ್ಕೂ ಹೆಚ್ಚು ಪ್ರಮುಖ ಪ್ರಾಚ್ಯಾವಶೇಷಗಳು ಪತ್ತೆಯಾಗಿದ್ದರು. ತಜ್ಞರು ಈ ಅವಶೇಷಗಳ ಮಹತ್ವ ಮತ್ತು ಕಾಲಮಾನವನ್ನು ಪರಿಶೀಲಿಸಿದ್ದಾರೆ. ಕೋಟೆ ಗೋಡೆಯ ತಳಪಾಯವಿರಬಹುದೆಂದು ತಜ್ಞರು ಅಂದಾಜಿಸಿದ್ದಾರೆ ಎಂದು ಲಕ್ಕುಂಡಿ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ.

ಉತ್ಖನನ ಕಾರ್ಯ ಪೂರ್ಣಗೊಂಡು, ಮಾರ್ಚ್ 30ರಂದು ನಡೆಯುವ ವೀರಭದ್ರೇಶ್ವರ ಜಾತ್ರೆಗೆ ಅನುಕೂಲ ಮಾಡಿಕೊಡುವಂತೆ ಸ್ಥಳವನ್ನು ಪ್ಲಾಸ್ಟಿಕ್ ತಾಡಪತ್ರಿ ಮತ್ತು ಮಣ್ಣಿನಿಂದ ಮುಚ್ಚಲಾಗಿದೆ. ನಂತರ ಕೇಂದ್ರ ಸರಕಾರದ ಅನುಮತಿಯಲ್ಲಿ ಲಕ್ಕುಂಡಿಯ ಇತರೆ 6-8 ಸ್ಥಳಗಳಲ್ಲಿ ಉತ್ಖನನ ಕಾರ್ಯ ಮುಂದುವರಿಯಲಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಲಕ್ಕುಂಡಿಯನ್ನು ಯುನೆಸ್ಕೋ ವರ್ಲ್ಡ್ ಹೆರಿಟೇಜ್ ಪಟ್ಟಿಗೆ ಸೇರಿಸುವಂತೆ ಪ್ರಸ್ತಾವನೆ ಕಳಿಸಿದ್ದಾರೆ.

ಸಿದ್ಧಲಿಂಗೇಶ್ವರ ಪಾಟೀಲ ಪ್ರಕಾರ, ಈ ಪ್ರದೇಶದಲ್ಲಿ 101 ಗುಡಿ ಮತ್ತು ಭಾವಿಗಳ ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯಲಿದೆ.

> "ಇತಿಹಾಸ ತಜ್ಞರ ಸ್ಥಳ ಪರಿಶೀಲನೆ ನಂತರ ಉತ್ಖನನ ಕಾರ್ಯಕ್ಕೆ ಪೂರ್ಣ ವಿರಾಮ ಹಾಕಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ, ಇತಿಹಾಸ ತಜ್ಞರ ಸೂಚನೆಯಂತೆ ಕೇಂದ್ರ ಸರಕಾರದ ಅನುಮತಿ ಪಡೆದು ಲಕ್ಕುಂಡಿ ಗ್ರಾಮದ ಇನ್ನೂ 6-8 ಸ್ಥಳದಲ್ಲಿ ಉತ್ಖನನ ಕಾರ್ಯ ಮಾಡುವ ಆಲೋಚನೆ ಇದೆ"
>
> **-ಶರಣು ಗೋಗೇರಿ, ಆಯುಕ್ತರು,** ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ.

> "ಕಳೆದ 47 ದಿನಗಳಿಂದ ನಡೆದ ಉತ್ಖನನದಲ್ಲಿ ಹಲವು ಮಹತ್ವದ ಪ್ರಾಚ್ಯಾವಶೇಷಗಳು ದೊರೆತ್ತಿವೆ. ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರು ಲಕ್ಕುಂಡಿಯನ್ನು ಯುನೆಸ್ಕೂ ಪಟ್ಟಿಗೆ ಸೇರಿಸಲು ಸರಕಾರದಿಂದ ಈಗಾಗಲೇ ಪ್ರಸ್ತಾವನೆಯನ್ನು ಕಳಿಸಿದ್ದು ಇಲ್ಲಿರುವ 101 ಗುಡಿ, ಭಾವಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯಲಿದೆ"
>
> **-ಸಿದ್ಧಲಿಂಗೇಶ್ವರ ಪಾಟೀಲ,** ಸದಸ್ಯರು, ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ

# ರಂಗ ಚತುರೆ ಮಾಲತಿಶ್ರೀಗೆ ಗೌರವ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಉತ್ತರ ಕರ್ನಾಟಕ ರಂಗಭೂಮಿಗೆ ಹೆಚ್ಚು ಆದ್ಯತೆ ನೀಡುವ ಜೊತೆಗೆ ಹಲವು ಕಲಾವಿದರಿಗೆ ಪೋಷಕವಾಗಿ ನಿಂತಿದೆ ಎಂದು ಹಿರಿಯ ಚಲನಚಿತ್ರ ನಿರ್ದೇಶಕ, ಕಲಾವಿದ, ಸಾಹಿತಿ, ಪತ್ರಕರ್ತರಾದ ಹಿರಿಯೂರು ರಾಘವೇಂದ್ರ ಹೇಳಿದರು.

ಡಾ. ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನದಿಂದ ರಂಗ ಚತುರೆ ಮಾಲತಿಶ್ರೀ ಮೈಸೂರು ಅವರಿಗೆ ಭವಾನಿ ನಗರದಲ್ಲಿ ಏರ್ಪಡಿಸಿದ್ದ ಗೌರವ ಸನ್ಮಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ರಂಗಕರ್ಮಿ, ಸಿನಿಮಾ ಹಾಗೂ ಧಾರವಾಹಿಗಳಲ್ಲಿ ನಟಿಸುತ್ತ ಮನೆಮಾತಾಗಿರುವ ಹಿರಿಯ ಕಲಾವಿದೆ ಮಾಲತಿಶ್ರೀ ಮೈಸೂರು ಅವರನ್ನು ಹುಬ್ಬಳ್ಳಿ ನೆಲದಲ್ಲಿ ಸನ್ಮಾನಿಸುತ್ತಿರುವುದು ಸಂತಸದ ವಿಷಯ. ಹುಬ್ಬಳ್ಳಿ-ಧಾರವಾಡ ಈ ನೆಲದಲ್ಲಿ ಹಲವಾರು ಪ್ರತಿಭೆಗಳು ಮಿಂಚುತ್ತಿವೆ. ಅವುಗಳಿಗೆ ಇನ್ನಷ್ಟು ಪ್ರೋತ್ಸಾಹ ಅಗತ್ಯ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಉತ್ತರ ಕರ್ನಾಟಕ ಭಾಗದ ಹಲವಾರು ನಟ, ನಟಿಯರು ಹಾಗೂ ತಾಂತ್ರಿಕ ವರ್ಗದವರು ಕೆಲಸ ಮಾಡುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ ಅವರು, ನನ್ನ ಸಿನಿಮಾ ಹಾಗೂ ಧಾರವಾಹಿಗಳಲ್ಲಿ ಈ ಭಾಗದ ಕಲಾವಿದರನ್ನು ಬಳಸಿಕೊಂಡಿರುವುದಾಗಿ ಹೇಳಿದರು.

ಹಿರಿಯ ನಟಿ ಮಾಲತಿಶ್ರೀ ಮೈಸೂರು ಅವರನ್ನು ಪ್ರತಿಷ್ಠಾನದಿಂದ ಸತ್ಕರಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾಲತಿಶ್ರೀ ಮೈಸೂರು, ಉತ್ತರ ಕರ್ನಾಟಕ ನನಗೆ ತವರು ಮನೆ ಇದ್ದಂತೆ. ಈ ಭಾಗದಲ್ಲಿ ನಾನು ಅತಿ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಉತ್ತರ ಕರ್ನಾಟಕದ ಜನರ ಋಣ ತೀರಿಸಲು ಆಗದು. ರಂಗಭೂಮಿಯ ಪಯಣದ ನೆನಪಿಗಾಗಿ ಗೋಕಾಕದಲ್ಲಿ ಪ್ರತಿವರ್ಷ ರಂಗಕರ್ಮಿಗಳನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಮಾಡುತ್ತಿರುವೆ ಎಂದು ಹೇಳಿ, ನಿಮ್ಮೆಲ್ಲರ ಆಶೀರ್ವಾದ ಕಲಾವಿದರ ಮೇಲೆ ಇರಲಿ ಎಂದು ಮನವಿ ಮಾಡಿದರು.

ಬಸವರಾಜ ಕರ್ಕಿ, ರಾಘವೇಂದ್ರ ರಾಯ್ಕರ್, ಕವಿತಾ ಹಿರೇಮಠ, ಚಂದ್ರಹಾಸ ವೇರ್ಣೇಕರ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಸಿಪಿಐ ಪ್ರತಿಭಟನೆ

■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಅಡುಗೆ ಅನಿಲದ ಬೆಲೆ ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಸಿಪಿಐ) ವತಿಯಿಂದ ಹಗರಿಬೊಮ್ಮನಹಳ್ಳಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಹಳೆ ತಹಸೀಲ್ದಾರರ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಬೆಲೆ ಏರಿಕೆ ವಿರುದ್ಧ ಘೋಷಣೆ ಕೂಗುತ್ತಾ ಬಸವೇಶ್ವರ ವೃತ್ತದವರೆಗೆ ಸಾಗಿತು.

ಸಿಪಿಐ ತಾಲೂಕು ಕಾರ್ಯದರ್ಶಿ ಕೆ. ಗಂಗಾಧರ ಮಾತನಾಡಿ, "ಕೇಂದ್ರ ಸರ್ಕಾರ ಗೃಹೋಪಯೋಗಿ ಅಡುಗೆ ಅನಿಲದ ಬೆಲೆಯನ್ನು 60 ರೂ. ಹೆಚ್ಚಳ ಮಾಡುವ ಮೂಲಕ ಜನರಿಗೆ ಸಂಕಷ್ಟವನ್ನು ಉಂಟುಮಾಡಿದೆ. ಉಜ್ವಲ ಯೋಜನೆಯ ಬಡ ಫಲಾನುಭವಿಗಳಿಗೂ ಇದರ ಬಿಸಿ ತಟ್ಟಲಿದೆ" ಎಂದು ಹೇಳಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಹೆಚ್.ಎಂ. ಸಂತೋಷ್ ಮಾತನಾಡಿ, ಕಳೆದ ಮೂರು ತಿಂಗಳಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಸುಮಾರು 180 ರೂ. ಏರಿಕೆ ಮಾಡಲಾಗಿದೆ. ಈಗ ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ 60 ರೂ. ಹೆಚ್ಚಳ ಮಾಡಿರುವುದು ಜನಸಾಮಾನ್ಯರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಹಾಕುವಂತಾಗಿದೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಮತ್ತು ಅನಿಲದ ಬೆಲೆ ಕಡಿಮೆ ಇದ್ದಾಗ ಬೆಲೆ ಇಳಿಸಲಿಲ್ಲ. ಈಗ ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರಣ ಹೇಳಿ ಬೆಲೆ ಏರಿಕೆ ಮಾಡುವುದು ಸರಿಯಲ್ಲ ಎಂದು ಸರ್ಕಾರವನ್ನು ಪ್ರಶ್ನಿಸಿದರು. ಜೊತೆಗೆ ಅಡುಗೆ ಅನಿಲದ ಮೇಲಿನ ತೆರಿಗೆಯನ್ನು ಕೈಬಿಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಮಾರಾಟವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಿಪಿಐ ತಾಲೂಕು ಸಹ ಕಾರ್ಯದರ್ಶಿ ಬಿ. ದಾದವಲಿ, ಮುಖಂಡರಾದ ಕೆ. ಮುದಿಯಪ್ಪ, ಲಲಿತಾ, ಕೊಟ್ರೇಶ್, ಗಾಳೆಮ್ಮ, ನಾಗರಾಜ್, ಗಣೇಶ್, ಶಿವಕುಮಾರ್, ವಿಜಯಲಕ್ಷ್ಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.




### ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗದಂತೆ ಕಟ್ಟುನಿಟ್ಟಿನ ಕ್ರಮಕ್ಕೆ ರೈತ ಸಂಘ ಮನವಿ

# ವಸತಿ ಶಾಲೆಗಳಲ್ಲಿ ಕಣ್ಗಾವಲು ಪಡೆ ಸ್ಥಾಪನೆಗೆ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ವಿಜಯನಗರ ಜಿಲ್ಲೆಯ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗದಂತೆ ತಡೆಯಲು ಹಾಗೂ ಅವರ ಸುರಕ್ಷತೆಗಾಗಿ ವಿಶೇಷ ಕಣ್ಗಾವಲು ಪಡೆ ಸ್ಥಾಪಿಸಬೇಕು ಎಂದು ರಾಜ್ಯ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ. ವೀರ ಸಂಗಯ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪಕ್ಕದ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಅಹಿತಕರ ಘಟನೆಯಲ್ಲಿ ಒಂದು ಮಗು ಜೀವ ಕಳೆದುಕೊಂಡಿರುವುದು ಸಮಾಜದಲ್ಲಿ ಆತಂಕ ಮೂಡಿಸಿದೆ ಎಂದು ಹೇಳಿದರು.

ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವಾಗಿದೆ.

ಜಿಲ್ಲೆಯ ಎಲ್ಲಾ ವಸತಿ ಶಾಲೆಗಳ ಮುಖ್ಯಸ್ಥರ ತುರ್ತು ಸಭೆ ಕರೆದು, ವಿದ್ಯಾರ್ಥಿಗಳು ಡ್ರಗ್ಸ್, ಸಿಗರೇಟ್, ಮದ್ಯ ಸೇರಿದಂತೆ ಮಾದಕ ವಸ್ತುಗಳಿಗೆ ದಾಸರಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶಾಲಾ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾದಕ ವಸ್ತುಗಳ ಮಾರಾಟ ಹಾಗೂ ಕಾನೂನುಬಾಹಿರ ಚಟುವಟಿಕೆ ನಡೆಯದಂತೆ ತಡೆಯಲು ವಿಶೇಷ ಕಣ್ಗಾವಲು ಪಡೆ ರಚಿಸಬೇಕು. ವಸತಿ ಶಾಲೆಗಳಲ್ಲಿ ನಿರಂತರ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳ ಸುರಕ್ಷತೆ ಖಚಿತಪಡಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಜಿಲ್ಲಾಡಳಿತವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಕಚೇರಿಯ ತಹಶೀಲ್ದಾರ್ ಕಾರ್ತಿಕ್ ಅವರಿಗೆ ಮನವಿ ಸಲ್ಲಿಸಲಾಯಿತು. ರೈತ ಸಂಘದ ಮುಖಂಡರಾದ ಶಿವರಾಜ್, ರವಿಕುಮಾರ್, ರಮೇಶ್, ತಿಪ್ಪೇಸ್ವಾಮಿ, ದುರುಗಪ್ಪ, ಸೇವಾನಾಯ್ಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಪ್ರಾಮಾಣಿಕ ಸೇವೆಯಿಂದ ಜನಮನ ಗೆದ್ದ ಸೊನ್ನ ಗ್ರಾಮದ ಯುವಕ

# ಉತ್ತಮ ಪವರ್ ಮ್ಯಾನ್ ಪ್ರಶಸ್ತಿ ಪಡೆದ ಶಿವರಾಜ್



> "ಗ್ರಾಹಕರಿಗೆ ಯಾವುದೇ ಸಮಯದಲ್ಲಾದರೂ ಉತ್ತಮ ವಿದ್ಯುತ್ ಸೇವೆ ಒದಗಿಸುವುದು ನನ್ನ ಕರ್ತವ್ಯ. ಜನರಿಗೆ ತೊಂದರೆ ಆಗದಂತೆ ತಕ್ಷಣ ಸಮಸ್ಯೆ ಪರಿಹರಿಸುವುದು ನನ್ನ ಉದ್ದೇಶ."
>
> **– ಶಿವರಾಜ್ (Appu)**

■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಸೊನ್ನ ಗ್ರಾಮದ ಹೆಮ್ಮೆಯ ಪುತ್ರರಾದ ಶಿವರಾಜ್ (Appu) ಅವರು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (GESCOM) ಸಂಸ್ಥೆಯ ಉತ್ತಂಗಿ ಉಪವಿಭಾಗದಲ್ಲಿ ಪವರ್ ಮ್ಯಾನ್ ಆಗಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆ, ನಿಷ್ಠೆ ಮತ್ತು ಸೇವಾಭಾವದಿಂದ ನಿರ್ವಹಿಸುವ ಮೂಲಕ ಜನಮನ ಗೆದ್ದ ಕಾರ್ಯನಿಷ್ಠ ಉದ್ಯೋಗಿಯಾಗಿದ್ದಾರೆ.

ವಿದ್ಯುತ್ ಇಲಾಖೆ ಎಂದರೆ ದಿನರಾತ್ರಿ ಕರ್ತವ್ಯ ನಿರ್ವಹಿಸಬೇಕಾದ ಜವಾಬ್ದಾರಿ. ಮಳೆ, ಗಾಳಿ, ಬಿಸಿಲು ಎಂಬುದನ್ನೇ ಲೆಕ್ಕಿಸದೇ ಜನರಿಗೆ ನಿರಂತರ ವಿದ್ಯುತ್ ಸರಬರಾಜು ಆಗುವಂತೆ ನೋಡಿಕೊಳ್ಳುವುದು ಪವರ್ ಮ್ಯಾನ್‌ಗಳ ಪ್ರಮುಖ ಕರ್ತವ್ಯವಾಗಿದೆ. ಈ ಜವಾಬ್ದಾರಿಯನ್ನು ಶಿವರಾಜ್ (Appu) ಅವರು ಅತ್ಯಂತ ಹೊಣೆಗಾರಿಕೆಯಿಂದ ನಿರ್ವಹಿಸುತ್ತಿದ್ದಾರೆ.

ವಿದ್ಯುತ್ ವ್ಯತ್ಯಯ ಉಂಟಾದಾಗ ತಕ್ಷಣ ಸ್ಥಳಕ್ಕೆ ತೆರಳಿ ಸಮಸ್ಯೆಯನ್ನು ಪರಿಹರಿಸುವುದು ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆ ಆಗದಂತೆ ಸೇವೆ ನೀಡುವುದು ಇವರ ವಿಶೇಷತೆ. ಗ್ರಾಹಕರ ಸಮಸ್ಯೆಗಳನ್ನು ತಮ್ಮ ಸಮಸ್ಯೆಯಂತೆ ಪರಿಗಣಿಸಿ, ದಿನರಾತ್ರಿ ಎನ್ನದೆ ಸೇವೆ ನೀಡುವ ಇವರ ಮನೋಭಾವದಿಂದ ಜನರು ಕೂಡ ಇವರನ್ನು ಗೌರವದಿಂದ ನೋಡುತ್ತಾರೆ. ಇವರ ಈ ಸಾಧನೆಗೆ ವಿದ್ಯುತ್ ಇಲಾಖೆಯಿಂದ "ಉತ್ತಮ ಪವರ್ ಮ್ಯಾನ್" ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಸೊನ್ನ ಗ್ರಾಮದ ಈ ಯುವಕ ಇಂದು ತನ್ನ ಕರ್ತವ್ಯನಿಷ್ಠೆಯಿಂದ ಜಿಲ್ಲೆಯ ಜನರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿಯುವ ಸರ್ಕಾರಿ ಸಿಬ್ಬಂದಿ ಹೇಗಿರಬೇಕು ಎಂಬುದಕ್ಕೆ ಶಿವರಾಜ್ (Appu) ಅವರು ಉತ್ತಮ ಉದಾಹರಣೆ.

ಇವರಂತಹ ಸೇವಾ ಮನೋಭಾವದ ವ್ಯಕ್ತಿಗಳು ಸಮಾಜಕ್ಕೆ ಮಾದರಿಯಾಗಲಿ ಹಾಗೂ ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆಗಳನ್ನು ಮಾಡಿ ಜಿಲ್ಲೆಗೆ ಹೆಮ್ಮೆ ತರಲಿ ಎಂದು ಎಲ್ಲರೂ ಹಾರೈಸಿದ್ದಾರೆ.

## ನಾಳೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ - ರಾಣಿ ಚನ್ನಮ್ಮ ಮಹಿಳಾ ಹಿತರಕ್ಷಣಾ ಟ್ರಸ್ಟ್ ಉದ್ಘಾಟನೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ರಾಣಿ ಚನ್ನಮ್ಮ ಮಹಿಳಾ ಹಿತರಕ್ಷಣಾ ಟ್ರಸ್ಟ್ (ರಿ) ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಟ್ರಸ್ಟ್ ಉದ್ಘಾಟನಾ ಕಾರ್ಯಕ್ರಮವನ್ನು ಮಾರ್ಚ್ 14, 2026ರಂದು ಸಾಯಂಕಾಲ 5-00 ಗಂಟೆಗೆ ಮುಳಗುಂದ ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿ ಗವಿಮಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಣಿ ಚನ್ನಮ್ಮ ಮಹಿಳಾ ಹಿತರಕ್ಷಣಾ ಟ್ರಸ್ಟ್ ಅಧ್ಯಕ್ಷೆ ನಿರ್ಮಲಾ ಚಿಂಚಲಿ ವಹಿಸಲಿದ್ದಾರೆ.

ಉದ್ಘಾಟಕರಾಗಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಮಹಿಳಾ ಘಟಕದ ಅಧ್ಯಕ್ಷೆ ವಸಂತ ಉಲ್ಲತ್ತಿ ಭಾಗವಹಿಸಲಿದ್ದು, ಉಪನ್ಯಾಸಕರಾಗಿ ವೀರಶೈವ ಲಿಂಗಾಯತ ಮಹಾಸಭೆಯ ರಾಜ್ಯ ಉಪಾಧ್ಯಕ್ಷೆ ಮಾಲಾದೇವಿ ದಂಡರಗಿ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ನೀಲಮ್ಮ ಬೋಳನವರ, ಶಿವಣ್ಣಾ ನೀಲಗುಂದ, ರಾಮಣ್ಣಾ ಕಮಾಜಿ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕಿ ವಿ.ಬಿ. ಪಾಟೀಲ, ಮಂಗಳಾ ನೀಲಗುಂದ ಹಾಗೂ ಶೋಭಾ ಪಾಟೀಲ ಅವರನ್ನು ಸನ್ಮಾನಿಸಲಾಗುವುದು. ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷೆ ನಿರ್ಮಲಾ ಚಿಂಚಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಡಂಬಳ, ಪೇಠಾ ಆಲೂರ, ಸಿಂಗಟಾಲೂರ, ಬಿಡನಾಳ ಗ್ರಾಮ ಪಂಚಾಯತಿಗಳಿಂದ ಶೇ.100 ಸಾಧನೆ**

# ಕರ ವಸೂಲಿಯಲ್ಲಿ ಮುಂಡರಗಿ ತಾಲೂಕು ಮೂರನೇ ಸ್ಥಾನ!

■ ವಿಜಯಸಾಕ್ಷಿ ಸುದ್ದಿ, ಡಂಬಳ

ಗದಗ ಜಿಲ್ಲೆಯ ಗ್ರಾಮ ಪಂಚಾಯತಿಗಳ ಕರ ವಸೂಲಿ ಕಾರ್ಯದಲ್ಲಿ ಮುಂಡರಗಿ ತಾಲೂಕಿನ ಗ್ರಾಮ ಪಂಚಾಯತಿಗಳು ಉತ್ತಮ ಸಾಧನೆ ಮಾಡಿದ್ದು ಜಿಲ್ಲೆಯಲ್ಲಿ ಮೂರನೇ ಸ್ಥಾನವನ್ನು ಪಡೆದಿವೆ.

ಕರ ವಸೂಲಿಯಲ್ಲಿ ಡಂಬಳ, ಪೇಠಾ ಆಲೂರ, ಸಿಂಗಟಾಲೂರ ಹಾಗೂ ಬಿಡನಾಳ ಗ್ರಾಮ ಪಂಚಾಯತಿಗಳು ಶೇ.100 ರಷ್ಟು ಪ್ರಗತಿ ಸಾಧಿಸಿದ್ದರೆ, ಉಳಿದ ಗ್ರಾಮ ಪಂಚಾಯತಿಗಳು ಶೇ.90 ರಿಂದ 95 ರಷ್ಟು ಪ್ರಗತಿ ದಾಖಲಿಸಿವೆ. ಗ್ರಾಮ ಮಟ್ಟದಲ್ಲಿ ಪಿಡಿಓಗಳು, ಸಿಬ್ಬಂದಿಗಳು ಹಾಗೂ ಜನಪ್ರತಿನಿಧಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸುತ್ತಿರುವುದರಿಂದ ಕರ ವಸೂಲಿ ಪ್ರಮಾಣದಲ್ಲಿ ಉತ್ತಮ ಪ್ರಗತಿ ಕಂಡುಬಂದಿದೆ.



ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾಗುವ ತೆರಿಗೆ ಹಣವನ್ನು ರಸ್ತೆ, ಕುಡಿಯುವ ನೀರು, ಸ್ವಚ್ಛತೆ, ಬೀದಿ ದೀಪ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಲಾಗುತ್ತದೆ. ತೆರಿಗೆ ಪಾವತಿ ಬಗ್ಗೆ ಜಾಗೃತಿ ಮೂಡಿಸಲು ಗ್ರಾಮ ಪಂಚಾಯತಿಗಳಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಮುಂಡರಗಿ ತಾಲೂಕಿನ ಗ್ರಾಮ ಪಂಚಾಯತಿಗಳು ಇನ್ನಷ್ಟು ಶ್ರಮಿಸಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಗುರಿಯನ್ನು ಹೊಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಳಿದ ಗ್ರಾಮ ಪಂಚಾಯತಿಗಳು ಶೇ.90 ರಿಂದ 95 ರಷ್ಟು ಕರ ವಸೂಲಿ ಪ್ರಗತಿ ಸಾಧಿಸಿವೆ.

> "ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾಗುವ ತೆರಿಗೆ ಹಣವನ್ನು ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬಳಸಲಾಗುತ್ತದೆ. ಜಿಲ್ಲಾ ಹಿರಿಯ ಅಧಿಕಾರಿಗಳ ಸಲಹೆ ಮೇರೆಗೆ ಪಿಡಿಓ ಹಾಗೂ ಸಿಬ್ಬಂದಿ ವರ್ಗಗಳ ಕಾರ್ಯಕ್ಷಮತೆಯಿಂದ ಜಿಲ್ಲೆಯಲ್ಲಿ ಮೂರನೇ ಸ್ಥಾನ ಬಂದಿದೆ. ಮುಂದಿನ ದಿನಗಳಲ್ಲಿ ಮುಂಡರಗಿ ತಾಲೂಕಿನಲ್ಲಿ ಕರ ವಸೂಲಿ ನೂರಕ್ಕೆ ನೂರರಷ್ಟು ಸಾಧಿಸಲು ಶ್ರಮಿಸಲಾಗುತ್ತದೆ."
>
> **- ವಿಶ್ವನಾಥ ಹೊಸಮನಿ,** ಇಓ, ಮುಂಡರಗಿ.

### ಕರ ವಸೂಲಿಯ ಮಹತ್ವ

1) ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರಿ
2) ರಸ್ತೆ, ಕುಡಿಯುವ ನೀರು, ಸ್ವಚ್ಛತೆ, ಬೀದಿ ದೀಪ ವ್ಯವಸ್ಥೆ
3) ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಕಾರ್ಯಗಳಿಗೆ ಪ್ರಮುಖ ಆದಾಯ

**ಪಾಲಕರ ಸಭೆಯಲ್ಲಿ ಭಾವನಾತ್ಮಕ ಕ್ಷಣಗಳು; ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣದ ಅಗತ್ಯ - ವಿ.ವಿ. ಹಿರೇಮಠ**

# ಮಕ್ಕಳಿಂದ ತಂದೆ-ತಾಯಿಯರ ಪಾದಪೂಜೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಕ್ಕಳಿಗೆ ತಂದೆ-ತಾಯಿಯರ ಶ್ರಮದ ಫಲ ಹಾಗೂ ಸಂಸ್ಕಾರವನ್ನು ತಿಳಿಸುವ ಉದ್ದೇಶದಿಂದ ನಡೆದ ಪಾದಪೂಜೆ ಕಾರ್ಯಕ್ರಮವು ಪಾಲಕರಲ್ಲಿ ಭಾವನಾತ್ಮಕ ಕ್ಷಣಗಳನ್ನು ಉಂಟುಮಾಡಿತು. ಇಂತಹ ಕಾರ್ಯಕ್ರಮಗಳು ಮಕ್ಕಳಿಗೆ ತಂದೆ-ತಾಯಿಯರಿಗೆ ಗೌರವ ನೀಡುವ ಮೌಲ್ಯಗಳನ್ನು ಕಲಿಸುತ್ತವೆ ಎಂದು ಗಜೇಂದ್ರಗಡ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ವಿ.ವಿ. ಹಿರೇಮಠ ಹೇಳಿದರು.

ಪಟ್ಟಣದ ಪಿಎಂಶ್ರೀ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ಗುರುವಾರ ನಡೆದ ಪಾಲಕರ ಸಭೆ ಹಾಗೂ ಪಾಲಕರ ಪಾದಪೂಜಾ ಸಮಾರಂಭದಲ್ಲಿ ಅವರು ಮಾತನಾಡಿದರು.

ತಂದೆ-ತಾಯಿಂಯುರಿಗೆ ಮಕ್ಕಳು ಪಾದಪೂಜೆ ಮಾಡುವಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಒಳ್ಳೆಯ ಸಂಸ್ಕಾರ ಬೆಳೆಸಲು ಸಹಕಾರಿಯಾಗುತ್ತವೆ. ಮಕ್ಕಳಲ್ಲಿ ಬಾಲ್ಯದಿಂದಲೇ ಸಂಸ್ಕಾರಯುತ ಶಿಕ್ಷಣ ನೀಡುವುದು ಇಂದಿನ ಅಗತ್ಯವಾಗಿದ್ದು, ಶಿಕ್ಷಣದ ಜೊತೆಗೆ ಸಂಸ್ಕಾರವೂ ಅತಿ ಮುಖ್ಯವೆಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಆನಂದ ಕೋಟಗಿ, ಜಿಲ್ಲಾ ಕಾನಿಪ ಉಪಾಧ್ಯಕ್ಷ ಪ್ರಭುಸ್ವಾಮಿ ಅರವಟಗಿಮಠ, ಮುಖ್ಯ ಶಿಕ್ಷಕ ಬಸವರಾಜ ಕುರಿ, ಜೆ.ಎ. ಪಾಟೀಲ, ಎನ್.ಎಲ್. ಚವ್ಹಾಣ, ಎಂ.ಪಿ. ಅಣಗೌಡರ, ಎಸ್.ಐ. ಜಗಾಪುರ, ರಾಜೇಶ್ವರಿ ಗವಳಿ, ಶಿಕ್ಷಕ ಡಿ.ವಿ. ಕಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಹಿಳೆಯ ಗೌರವ, ಭದ್ರತೆ ಸಮಾಜದ ಹೊಣೆ: ಸಹನಾ ಜೋಳದ



■ ವಿಜಯಸಾಕ್ಷಿ ಸುದ್ದಿ, ಗದಗ

ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಗದಗಿನ ಸೌಂದರ್ಯ ತಜ್ಞೆ ಸಹನಾ ಜೋಳದ ಹೇಳಿದರು.

ಹುಲಕೋಟಿಯ ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಘಟಕ, ಯುವ ರೆಡ್ ಕ್ರಾಸ್ ಘಟಕ ಹಾಗೂ ಎನ್.ಎಸ್.ಎಸ್. ಘಟಕಗಳು ಐಕ್ಯುಎಸಿ ಅಡಿಯಲ್ಲಿ ಹಮ್ಮಿಕೊಂಡಿದ್ದ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಮಹಿಳೆಯರು ಶಿಕ್ಷಣ, ವಿಜ್ಞಾನ, ಆಡಳಿತ, ಉದ್ಯಮ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಮಹಿಳೆಯರು ಆತ್ಮವಿಶ್ವಾಸ ಹಾಗೂ ಸ್ವಾವಲಂಬನೆಯಿಂದ ಮುಂದೆ ಬಂದಾಗ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.


ಮಹಿಳಾ ಘಟಕದ ಸಂಯೋಜಕಿ ಡಾ. ಸಾರಿಕಾ ಪಾಟೀಲ ಮಾತನಾಡಿ, ಮಹಿಳೆಯರ ಸಾಧನೆ, ಸಮಾನತೆ ಮತ್ತು ಸಬಲೀಕರಣದ ಮಹತ್ವವನ್ನು ವಿವರಿಸಿದರು. ಯುವ ರೆಡ್ ಕ್ರಾಸ್ ಘಟಕದ ಸಂಯೋಜಕಿ ಮಹಾನಂದಾ ಹಿರೇಮಠ ಮಹಿಳೆಯರ ಸಾಧನೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಸಾಂಸ್ಕೃತಿಕ ವಿಭಾಗದ ಸಂಯೋಜಕ ರಮೇಶ ಹುಲಕುಂದ ಮಾತನಾಡಿ, ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರು ಕಾವ್ಯ, ಕಾದಂಬರಿ, ನಾಟಕ ಹಾಗೂ ಭಕ್ತಿ ಸಾಹಿತ್ಯದ ಮೂಲಕ ಸಮಾಜದ ಮೌಲ್ಯಗಳನ್ನು ಸಾರಿದ್ದಾರೆ ಎಂದು ಹೇಳಿದರು.

ಎನ್.ಎಸ್.ಎಸ್. ಘಟಕದ ಸಂಯೋಜಕ ಡಾ. ಅಪ್ಪಣ್ಣ ಹಂಜೆ ಮಾತನಾಡಿ ಇತಿಹಾಸದಲ್ಲಿ ಅನೇಕ ಮಹಿಳೆಯರು ಧೈರ್ಯ ಮತ್ತು ಜ್ಞಾನದಿಂದ ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ್ದು, ಅವರ ಜೀವನ ಸಾಧನೆಗಳು ಮಹಿಳಾ ಸಬಲೀಕರಣಕ್ಕೆ ಪ್ರೇರಣೆಯಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ. ಸುಧಾ ಕೌಜಗೇರಿ ಮಹಿಳೆಯರಿಗೆ ಗೌರವ, ಸುರಕ್ಷತೆ ಹಾಗೂ ಶಿಕ್ಷಣದ ಅವಕಾಶಗಳನ್ನು ಒದಗಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಎಂಭತ್ತು ಮೀರಿದರೂ ದಣಿಯದ ಶಿಶುವೈದ್ಯ ಡಾ. ಲಖಾನಿ!




■ ವಿಜಯಸಾಕ್ಷಿ ಸುದ್ದಿ, ಗದಗ

ಗದಗದ ಗೌರವಾನ್ವಿತ ಹಿರಿಯ ಶಿಶುವೈದ್ಯ ಡಾ. ಜಾಫರ್ ಲಖಾನಿ, ಗಮನಾರ್ಹ ಸಹಾನುಭೂತಿ ಮತ್ತು ಬದ್ಧತೆಯೊಂದಿಗೆ ಮಕ್ಕಳ ಆರೈಕೆಗಾಗಿ 45 ವರ್ಷಗಳಿಗೂ ಹೆಚ್ಚು ಕಾಲ ಮೀಸಲಿಟ್ಟಿದ್ದಾರೆ. 82+ ವರ್ಷ ವಯಸ್ಸಿನಲ್ಲೂ, ಅವರು ಉತ್ಸಾಹಭರಿತರಾಗಿದ್ದಾರೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿದ್ದಾರೆ, ವಿಶೇಷವಾಗಿ ಶಿಶುಗಳಲ್ಲಿನ ಜಿಐ ಟ್ರಾಕ್ಟ್ ವೈಪರೀತ್ಯಗಳು ಮತ್ತು ಸಿಸ್ಟಿಕ್ ಮೂತ್ರಪಿಂಡ ಕಾಯಿಲೆಗಳ ಕುರಿತು ತಮ್ಮ ವಿಶಾಲ ಅಭ್ಯಾಸದಿಂದ ಅಮೂಲ್ಯವಾದ ವೈದ್ಯಕೀಯ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಇತ್ತೀಚೆಗೆ ಗದುಗಿನ ವೈದ್ಯರಾದ ಡಾ ನೂರಾನಿ, ಡಾ ಕುರುಡಗಿ ಎಲ್ಲರೂ ಹಿರಿಯ ವೈದ್ಯರಾದ ಡಾ ಲಾಖಾನಿಯವರಿಗೆ ಅಭಿನಂದಿಸಿ ನೂರು ಕಾಲಗಳ ವರೆಗೆ ಗದುಗಿನ ಜನರ ಸೇವೆ ಮಾಡಲಿ ಎಂದು ಆಶಿಸಿದರು.

ಗುಣಪಡಿಸುವುದು, ಕಲಿಸುವುದು ಮತ್ತು ಮಕ್ಕಳ ಜ್ಞಾನವನ್ನು ಮುಂದುವರಿಸುವ ಅವರ ಜೀವಿತಾವಧಿಯ ಸಮರ್ಪಣೆ ವೈದ್ಯಕೀಯ ಭ್ರಾತೃತ್ವವನ್ನು ಪ್ರೇರೇಪಿಸುತ್ತಿದೆ. ಅವರ ಅಸಾಧಾರಣ ಸೇವೆ ಮತ್ತು ಔಷಧದ ಬಗ್ಗೆ ಅಚಲವಾದ ಉತ್ಸಾಹ ಅನನ್ಯ. ಅವರು ಕೆಎಚ್‌ಪಿಐಎಂಎಸ್; ಸಿಎಸ್‌ಐ ಆಸ್ಪತ್ರೆ ಗದಗದಲ್ಲಿ ಆಗಾಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದಾರೆ. ಇಲ್ಲಿ ಅವರು ಪಿಜಿಗಳು ಮತ್ತು ಅಲ್ಲಿನ ಸಿಬ್ಬಂದಿಗೆ ಮಣಿಪಾಲ್ ಆಸ್ಪತ್ರೆಯಲ್ಲಿ ತಮ್ಮ ಅಮೂಲ್ಯ ಅನುಭವಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ. ಐಎಂಎ ಅಧ್ಯಕ್ಷ ಡಾ. ಶ್ರೀಧರ್ ಕುರಡಗಿ ಅವರು ಪ್ರಸಿದ್ಧ ಶಿಶುವೈದ್ಯರಾದ ಲಾಖಾನಿ ಅವರ ಸೇವೆ ಬಗ್ಗೆ ಇತ್ತೀಚೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅವರ ಹಿರಿಯ ಸ್ನೇಹಿತರು ಡಾ. ನಾಗನೂರ್ ಅಧ್ಯಕ್ಷ ಆರ್‌ಎಂಎಸ್‌ಎಸ್ ಹುಲಕೋಟಿ; ಡಾ. ಶಶಿಧರ್ ರೇಷ್ಮೆ ಸ್ತ್ರೀರೋಗತಜ್ಞ ಮತ್ತು ಡಾ. ವೆಂಕಟೇಶ್ ಕಾರಂತ್ ರೇಡಿಯಾಲಜಿಸ್ಟ್ ಅವರೂ ಕೂಡ ಹಿರಿಯ ವೈದ್ಯರ ಬಗ್ಗೆ ಅಭಿನಂದನೆಗಳನ್ನು ವ್ಯಕ್ತಪಡಿಸಿದ್ದಾರೆ. ಐಎಂಎ ಮಾಜಿ ಅಧ್ಯಕ್ಷರು ಮತ್ತು ಹಿರಿಯ ವೈದ್ಯ ಡಾ. ಪ್ಯಾರಾಲಿ ನೂರಾನಿ ಅವರು ಹಿರಿಯ ವೈದ್ಯರು ನನ್ನ ಚಿಕ್ಕಪ್ಪನಾಗಿರುವುದು ಗದಗ ಮತ್ತು ಸುತ್ತಮುತ್ತಲಿನ ನಮಗೆಲ್ಲರಿಗೂ ಹೆಮ್ಮೆ ತಂದಿದೆ ಎಂದು ಹೇಳುತ್ತಾರೆ.

ಡಾ.ಜೆ.ಕೆ. ಲಾಖಾನಿಯವರಿಗೆ ಬೆಂಗಳೂರು ಐಎಂಎ ಅವರು 2022 ರಲ್ಲಿ ಪ್ರಶಸ್ತಿ ಪ್ರಧಾನ ಮಾಡಿದರು- ಭಾರತೀಯ ವೈದ್ಯಕೀಯ - ಸಂಘ ಬೆಂಗಳೂರು ಇವರ ಮಾಡಿದ - ಸೇವೆಯನ್ನು ಸ್ಮರಿಸಿ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಇವರಿಗೆ ಬೆಸ್ಟ್ ವೈದ್ಯ ರಾಜ್ಯ ಪ್ರಶಸ್ತಿಯನ್ನು ನೀಡಿ ಸತ್ಕರಿಸಿ ಗೌರವಿಸಲಾಯಿತು.

## ರೈತ ಹೋರಾಟಗಾರ ಸಂಗಣ್ಣಗೆ ಶ್ರದ್ಧಾಂಜಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚಿಗೆ ನಿಧನರಾದ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಸಂಗಣ್ಣ ಬಾಗೇವಾಡಿ ಅವರಿಗೆ ಜಿಲ್ಲಾ ಘಟಕದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ನಟರಾಜ ಸವಡಿ ಹಾಗೂ ಪದಾಧಿಕಾರಿಗಳಾದ ನಾಗವೇಣಿ ಕುಡಪಲ್ಲಿ, ಮೋಹನ ಇಮರಾಪೂರ, ಮಹಮ್ಮದ್ ಅಲಿ, ರುದ್ರಗೌಡ ಪಾಟೀಲ, ಮಲ್ಲಿಕಾರ್ಜುನ ಹಿರೇಮಠ, ವಿಶ್ವನಾಥ ಹಿರೇಮಠ ಸೇರಿದಂತೆ ಮುಂತಾದವರು ದಿ.ಸಂಗಣ್ಣ ಬಾಗೇವಾಡಿ ಅವರ ಗುಣಗಾನ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು.



# ಗದಗದಲ್ಲಿ ರಂಗಕಲಾವಿದರ ಛಾಯಾಚಿತ್ರ ಪ್ರದರ್ಶನ!



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗದಲ್ಲಿ ಪ್ರತಿವರ್ಷ ನಡೆಯುವ ಶ್ರೀಮತಿ ಮಾಲತಿಶ್ರೀ ಮೈಸೂರು "ಆಶಾಕಿರಣ ಕಲಾ ಟ್ರಸ್ಟ್" (ರಿ), ಬೆಂಗಳೂರು ವತಿಯಿಂದ ರಂಗಭೂಮಿ ಛಾಯಾಚಿತ್ರ ಪ್ರದರ್ಶನ ಯಶಸ್ವಿಯಾಗಿ ಆಯೋಜಿಸಲಾಯಿತು. ಈ ವರ್ಷದ ಕಾರ್ಯಕ್ರಮದಲ್ಲಿ ಹಿರಿಯ ರಂಗಭೂಮಿ ಕಲಾವಿದರ ಛಾಯಾಚಿತ್ರಗಳು ಮತ್ತು ಹಳೆಯ ಪತ್ರಿಕೆ ಲೇಖನಗಳನ್ನು ವಿಶೇಷವಾಗಿ ಪ್ರದರ್ಶನಕ್ಕೆ ತರುವ ಮೂಲಕ ನೆನಪುಗಳ ವೈಭವವನ್ನು ಪುನರ್‌ಜೀವಿತಗೊಳಿಸಲಾಯಿತು ಎಂದು ಶ್ರೀ ಆನಂದ ತಿಳಿಸಿದ್ದಾರೆ.

ಪ್ರದರ್ಶನವು ದಿ. ಬಿ.ಆರ್. ಅರಷಿಣಗೋಡಿ ಮತ್ತು ದಿ. ಬಸವಣ್ಣೆಪ್ಪ ಹೊಸಮನಿ ಅವರ ಕಲಾತ್ಮಕ ಸಾಧನೆಗಳನ್ನು ಗುರುತಿಸುವಂತೆ ವಿನ್ಯಾಸಗೊಳಿಸಲಾಯಿತು.

ಚಿತ್ರಕಲಾವಿದ ಶಂಕರಗೌಡ ಪಾಟೀಲ ಅವರ ಸಂಗ್ರಹಿತ ಛಾಯಾಚಿತ್ರಗಳು ಮತ್ತು ಕಲಾವಿದರ ಪತ್ರ ವೀಕ್ಷಣೆಯು ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಿತು.

ಕಾರ್ಯಕ್ರಮದಲ್ಲಿ ಶ್ರೀ ಮುರುಘಾರಾಜೇಂದ್ರ ಮಹಾಸ್ವಾಮಿ, ಶ್ರೀ ಮಲ್ಲಯ್ಯ ಮಹಾಸ್ವಾಮಿ, ಘೋಡಗೇರಿ, 12ನೇ ಪ್ರಶಸ್ತಿ ಪುರಸ್ಕೃತರು: ಡಾ. ಶಿವಕುಮಾರ ತಾತಾನ (ಕುಡುದರಹಾಳಿನ) ಮತ್ತು ಶ್ರೀ ಜಯರಾಜ ಬಸವರಾಜ ಹೊಸಮನಿ ಸಾನಿಧ್ಯವಹಿಸಿದ್ದರು. ಪಾಲ್ಗೊಂಡವರಲ್ಲಿ ಅಶೋಕ ಪೂಜಾರಿ, ಶ್ರೀಮತಿ ಸ್ವಾತಿ, ಡಾ. ಮೋಹನ ಭಸ್ಮೆ, ಡಾ. ವೆಂಕಟೇಶ ಚೌಥಾಯಿ, ಶ್ರೀ ಮಹಾಂತೇಶ ಗಂ. ತಂವಶಿ, ಮಲ್ಲಿಕಾರ್ಜುನ ಕ. ಕಲ್ಲೋಳ್ಳಿ, ಶ್ರೀಮತಿ ರಜಿನಿ ಜಿರಗಾಳ, ಮತ್ತು ಪಾರಿಜಾತ ಕಲಾವಿದ ಈಶ್ವರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಜಿಲ್ಲಾಧಿಕಾರಿ ಕಚೇರಿಯಲ್ಲಿ ಜನರಿಗೆ ಕುರ್ಚಿ-ನೀರೂ ಇಲ್ಲವೇ?

▶▶ ಮೊದಲನೇ ಪುಟದಿಂದ

ಪರಿಸ್ಥಿತಿ ಕಂಡುಬಂತು. ಇತ್ತ ಅಧಿಕಾರಿಗಳ ಚೇಂಬರ್‌ಗಳು ದುಬಾರಿ ಫರ್ನಿಚರ್‌ಗಳಿಂದ ಕಂಗೊಳಿಸುತ್ತಿದ್ದರೂ ಜನ ಸಾಮಾನ್ಯರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳ ಕೊರತೆ ಕಂಡುಬರುವುದು ವಿಪರ್ಯಾಸವಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎನ್ನುವ ಮಾತಿದ್ದರೂ ಇಲ್ಲಿ ಅಧಿಕಾರಿಗಳೇ ಪ್ರಭುಗಳೆಂಬಂತ ಸ್ಥಿತಿ ನಿರ್ಮಾಣವಾಗಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೇಸಿಗೆ ಕಾಲದಲ್ಲಿಯೇ ಜನರಿಗೆ ಕುಡಿಯುವ ನೀರು ಹಾಗೂ ಕೂರುವ ವ್ಯವಸ್ಥೆ ಮಾಡುವುದು ಅಗತ್ಯವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಕೇಳಿ ಬರುತ್ತಿದೆ.

### ತಾಯಿಯ ಪಾದಪೂಜೆ ಮಾಡಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು

# ಯಲ್ಲಾಪುರ ಶಾಲೆಯಲ್ಲಿ ಭಾವುಕ ಕ್ಷಣ!



> "ತಾಯಿಯೇ ಮೊದಲ ಗುರು; ತಾಯಿಗೆ ಪಾದಪೂಜೆ ಮಾಡುವ ಮೂಲಕ ವಿದ್ಯಾರ್ಥಿಗಳು ತೋರಿದ ಗೌರವ ಅತ್ಯಂತ ಶ್ಲಾಘನೀಯ. ಎಸ್‌ಎಸ್‌ಎಲ್‌ಸಿ ಉತ್ತಮ ಭವಿಷ್ಯದ ಭದ್ರ ಬುನಾದಿಯಾಗಿದ್ದು, ಉತ್ತಮ ಅಂಕಗಳೊಂದಿಗೆ ಶಾಲೆಗೆ ಕೀರ್ತಿ ತರಬೇಕು."
>
> – **ಶಿವಾನಂದ ಅಸುಂಡಿ,** ಸಿಆರ್‌ಪಿ.



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ತಾಲೂಕಿನ ಯಲ್ಲಾಪುರ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲಿ ಎಂಬ ಉದ್ದೇಶದಿಂದ ಮಂಗಳವಾರ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಯಿತು. ಈ ವೇಳೆ ಪಾಲಕರು ಮತ್ತು ಶಿಕ್ಷಕರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ತಾಯಂದಿರಿಗೆ ಪಾದಪೂಜೆ ಮಾಡುವ ಭಾವನಾತ್ಮಕ ಕಾರ್ಯಕ್ರಮವೂ ನಡೆಯಿತು.

ಕಾರ್ಯಕ್ರಮವನ್ನು ದೊಡ್ಡೂರು ಕ್ಲಸ್ಟರ್ ಮಟ್ಟದ ಸಿಆರ್‌ಪಿ ಶಿವಾನಂದ ಅಸುಂಡಿ ಉದ್ಘಾಟಿಸಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದ್ದು, ಶೇಕಡಾ ನೂರು ಫಲಿತಾಂಶದೊಂದಿಗೆ ಶಾಲೆ, ತಾಲೂಕು ಹಾಗೂ ಜಿಲ್ಲೆಗೆ ಕೀರ್ತಿ ತರಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಿಕ್ಷಕ ಎಮ್.ಹೆಚ್. ದಿಂಡವಾಡ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯೆಯೊಂದಿಗೆ ಮಾನವೀಯ ಮೌಲ್ಯಗಳನ್ನೂ ಅಳವಡಿಸಿಕೊಳ್ಳುವುದು ಅಗತ್ಯ. ಪರೀಕ್ಷೆಯ ಭಯ ಬಿಟ್ಟು ಸಕಾರಾತ್ಮಕ ಮನೋಭಾವದೊಂದಿಗೆ ನಿರಂತರ ಅಭ್ಯಾಸ ಮಾಡಿದರೆ ಯಶಸ್ಸು ಖಚಿತ ಎಂದು ತಿಳಿಸಿದರು.

ಶಾಲೆಯಿಂದ ವರ್ಗಾವಣೆಗೊಂಡ ಶಿಕ್ಷಕರಾದ ಎಸ್.ಐ. ಮುರಡಿ, ಪಿ.ಎಸ್. ಲಚ್ಚಾಣ ಮತ್ತು ಶ್ರೀಮತಿ ಎ.ಐ. ಡಂಬಳ ಅವರು ತಲಾ 25,000 ದೇಣಿಗೆ ನೀಡಿ, ಅದರ ಬಡ್ಡಿ ಮೊತ್ತವನ್ನು ಪ್ರತಿ ವರ್ಷ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವಾಗಿ ನೀಡಲು ಘೋಷಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಂಜಣ್ಣ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಮಹಾಂತಗೌಡ್ರ ಭರಮಗೌಡ್ರ, ಮುಖ್ಯಗುರು ಬಿ.ಎನ್. ಗಾಯಕ್ವಾಡ, ನಿಂಗಪ್ಪ ಮತ್ತೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಿರೂಪಣೆಯನ್ನು ಗೀತಾ ಹಳ್ಳಿ, ರೂಪಾ ಭರಮಗೌಡ್ರ, ಮಹೇಶ್ ಸಾಸಲವಾಡ, ಹೇಮಾವತಿ ಲಮಾಣಿ, ನಂದೀಶಗೌಡ ಪಾಟೀಲ ಹಾಗೂ ವಿದ್ಯಾ ಮತ್ತೂರ ನಡೆಸಿದರು.

## ಹೊಳೆ ಇಟಗಿ ಶಾಲೆಯಲ್ಲಿ ದತ್ತಿ ಕಾರ್ಯಕ್ರಮ



**■ ವಿಜಯಸಾಕ್ಷಿ ಸುದ್ದಿ, ಗದಗ**

ಶಿರಹಟ್ಟಿ ತಾಲೂಕಿನ ಹೊಳೆ ಇಟಗಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಧಾರವಾಡ ವತಿಯಿಂದ ದಿವಂಗತ ತಿಪ್ಪಮ್ಮ ಕುಂಟಿ ಹಾಗೂ ತಾರಮ್ಮ ಕುಂಟಿ ಸ್ಮರಣಾರ್ಥ ದತ್ತಿ ಕಾರ್ಯಕ್ರಮವನ್ನು ಮಾರ್ಚ್ 10ರಂದು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಜಂಟಿ ನಿರ್ದೇಶಕರಾದ ಜಿ.ಆರ್. ಕೆಂಚರಡ್ಡೇರ ಅವರು ಪ್ರತಿಷ್ಠಾನದ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳ ಕುರಿತು ಮಾಹಿತಿ ನೀಡಿದರು. ಇನ್ನೋರ್ವ ಅತಿಥಿಯಾದ ನಿವೃತ್ತ ಶಿಕ್ಷಕರಾದ ವ್ಹಿ.ಎಂ. ಕಾಳಮ್ಮನವರ ಅವರು ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಗೆ ತಕ್ಕ ಪುರಸ್ಕಾರ ನೀಡುವುದು ಶಿಕ್ಷಕರ ಮುಖ್ಯ ಕರ್ತವ್ಯ ಎಂದು ಹೇಳಿದರು.

ಪ್ರತಿಷ್ಠಾನದ ವತಿಯಿಂದ 2025–26ನೇ ಸಾಲಿನ ಆದರ್ಶ ವಿದ್ಯಾರ್ಥಿಗಳಾಗಿ ಆಯ್ಕೆಯಾದ 7ನೇ ತರಗತಿ ವಿದ್ಯಾರ್ಥಿ ಚೇತನ್ ಶಂಕಿನದಾಸರ ಹಾಗೂ ವಿದ್ಯಾರ್ಥಿನಿ ಭೂಮಿಕಾ ತಬರಡ್ಡಿ ಅವರಿಗೆ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ವ್ಹಿ.ಎಂ. ಕಾಳಮ್ಮನವರ ದಂಪತಿಗಳನ್ನು ಪ್ರತಿಷ್ಠಾನದ ವತಿಯಿಂದ ಗೌರವಿಸಲಾಯಿತು. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬಡ್ತಿ ಪಡೆದ ದೈಹಿಕ ಶಿಕ್ಷಣ ಶಿಕ್ಷಕರಾದ ಆರ್.ಎಸ್. ಮುದುಗಲ್ ಅವರನ್ನು ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

2024–25ನೇ ಸಾಲಿನಲ್ಲಿ ಹೆಚ್ಚು ಅಂಕ ಪಡೆದ 1ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ದಾನಿಗಳಾದ ನಿಂಗಣ್ಣ ಕುಂಟಿ, ಉಮಾದೇವ ಎನ್.ಇ., ಎಸ್‌ಡಿಎಂಸಿ ಅಧ್ಯಕ್ಷ ವಿಷ್ಣುರಡ್ಡಿ ತಿಮ್ಮರಡ್ಡೇರ, ರಾಘವೇಂದ್ರ ತಿಮ್ಮರಡ್ಡೇರ, ಸಿ.ಟಿ. ಹುರಕಣ್ಣವರ, ಎಸ್.ಎಸ್. ಹುಲ್ಲಳ್ಳಿ ಹಾಗೂ ನಿಂಗಪ್ಪ ಹುಲ್ಲೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥನೆ ಹಾಗೂ ಸ್ವಾಗತ ಗೀತೆಯನ್ನು ಹಾಡಿದರು. ಮುಖ್ಯಗುರು ಸಿ.ಟಿ. ಹುರಕಣ್ಣವರ ಸ್ವಾಗತಿಸಿದರು. ಜಯಶ್ರೀ ಪ್ರಾಸ್ತಾವಿಕ ನುಡಿಗಳಾಡಿದರು. ಶಿಕ್ಷಕಿ ಟಿ.ಎಫ್. ಪಾಟೀಲ ವಾರ್ಷಿಕ ವರದಿ ಮಂಡಿಸಿದರು. ಜಿ.ಡಿ. ಅಂಬಿಗೇರ್ ವಂದಿಸಿದರು ಹಾಗೂ ಕಾರ್ಯಕ್ರಮವನ್ನು ವಾಯ್.ಐ. ನದಾಫ್ ನಿರೂಪಿಸಿದರು.

## ಸಾಲಿಡಾರಿಟಿ ಯುಥ್ ಮೂವಮೆಂಟ್ ಗದಗ ಜಿಲ್ಲಾ ಕಚೇರಿ ಉದ್ಘಾಟನೆ – ಸೌಹಾರ್ದ ಇಫ್ತಾರ್ ಕೂಟ

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಾಲಿಡಾರಿಟಿ ಯುಥ್ ಮೂವಮೆಂಟ್ (ಎಸ್.ವಾಯ್.ಎಂ) ಗದಗ ಜಿಲ್ಲಾ ಕಚೇರಿಯ ಉದ್ಘಾಟನೆ ಹಾಗೂ ಸೌಹಾರ್ದ ಇಫ್ತಾರ್ ಕೂಟ ಕಾರ್ಯಕ್ರಮವನ್ನು ಗದಗ ನಗರದಲ್ಲಿ ಆಯೋಜಿಸಲಾಯಿತು.

ಎಸ್.ವಾಯ್.ಎಂ.ನ ನೂತನ ಕಚೇರಿಯನ್ನು ಶ್ರೀ ವೇದಮೂರ್ತಿ ಮಹೇಶ್ವರ ಸ್ವಾಮಿಗಳು (ಧರ್ಮದರ್ಶಿಗಳು, ಶ್ರೀ ಅಡವೀಂದ್ರಸ್ವಾಮಿ ಮಠ, ಗದಗ) ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಬ್ರ. ಇಲಿಯಾಸ್ ನಾಲಬಂದ (ರಾಜ್ಯ ಕಾರ್ಯದರ್ಶಿಗಳು, ಎಸ್.ವಾಯ್.ಎಂ ಕರ್ನಾಟಕ) ರಂಜಾನ್ ಹಬ್ಬದ ಮಹತ್ವ ಮತ್ತು ಅದರ ಆತ್ಮೀಯ ಸಂದೇಶಗಳ ಕುರಿತು ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ಕೃಷ್ಣಗೌಡ ಪಾಟೀಲ್ ಯುವಕರನ್ನು ಉದ್ದೇಶಿಸಿ ಮಾತನಾಡಿ, ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹಬಾಳ್ವೆ ಬೆಳೆಸುವ ಕಾರ್ಯಗಳಲ್ಲಿ ಯುವಕರು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜನಾಬ್ ಕೆ.ಐ. ಶೇಖ್, ಜನಾಬ್ ಮುನ್ನಾ ಕಲ್ಮನಿ (ಸ್ಥಾನಿಕ ಅಧ್ಯಕ್ಷರು, ಎಪಿಸಿಆರ್ ಗದಗ), ಎಸ್.ಎನ್. ಬಳ್ಳಾರಿ, ಶರೀಫ ಬಿಳೆಯಲಿ, ಮೊಹಮ್ಮದ್ ಯೂಸುಫ್ ಮುಲ್ಲಾ (ನಗರಾಧ್ಯಕ್ಷರು, ಎಸ್.ವಾಯ್.ಎಂ ಗದಗ) ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಗದಗ ಜಿಲ್ಲಾ ದಲಿತ ಸಂಘಟನೆಗಳ ಒಕ್ಕೂಟ ಹಾಗೂ ದಲಿತ ಕಲಾ ಮಂಡಳಿಯ ಸದಸ್ಯರು ಸೇರಿದಂತೆ ಸುಮಾರು 60 ಜನರು ಭಾಗವಹಿಸಿದ್ದರು.




## ಎಲ್‌ಪಿಜಿ ಸಿಲಿಂಡರ್ ಕಾಳುಸಂತೆ ಮಾರಾಟ ಆರೋಪ: ಏಜೆನ್ಸಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ–ಬೆಟಗೇರಿ ನಗರದ ಕೆಲ ಏಜೆನ್ಸಿಗಳು ಎಲ್.ಪಿ.ಜಿ ಗ್ಯಾಸ್ ಸಿಲಿಂಡರ್‌ಗಳನ್ನು ಕಾಳುಸಂತೆಯಲ್ಲಿ ಮಾರಾಟ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ಆರೋಪಿಸಿ, ಸ್ಲಂ ಜನಾಂದೋಲನ–ಕರ್ನಾಟಕ ಹಾಗೂ ಗದಗ ಜಿಲ್ಲಾ ಸ್ಲಂ ಸಮಿತಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ್ ಆರ್. ಮಾನ್ವಿ ಮಾತನಾಡಿ, ಗೃಹ ಬಳಕೆಯ ಎಲ್.ಪಿ.ಜಿ ಸಿಲಿಂಡರ್ ಕೊರತೆಯಿಂದ ಜನರು ಬ್ಲಾಕ್ ಮಾರ್ಕೆಟ್‌ಗೆ ತಲುಪುವಂತಾಗಿದೆ. 14.5 ಕೆ.ಜಿ ಗ್ಯಾಸ್ ಸಿಲಿಂಡರ್ ಒಂದನ್ನು ಸುಮಾರು 1500 ಕ್ಕೆ ಮಾರಾಟ ಮಾಡಲಾಗುತ್ತಿದೆ. ಮುಂಬರುವ ಹಬ್ಬಗಳ ಹಿನ್ನೆಲೆಯಲ್ಲಿ ಬೇಡಿಕೆ ಹೆಚ್ಚಾಗಿದ್ದು, ಕಂಪನಿಗಳು ಹೆಚ್ಚುವರಿ ಉತ್ಪಾದನೆ ಮಾಡಲು ಸೂಚನೆ ಪಡೆದಿದ್ದರೂ ಕೆಲ ಏಜೆನ್ಸಿಗಳು ಗ್ರಾಹಕರಿಗೆ ಸಿಲಿಂಡರ್ ನೀಡದೇ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ಆರೋಪಿಸಿದರು.

ಸ್ಲಂ ಸಮಿತಿ ಕಾರ್ಯದರ್ಶಿ ಅಶೋಕ ಕುಸಬಿ ಮಾತನಾಡಿ, ಗ್ರಾಹಕರು ಮೊಬೈಲ್ ಅಥವಾ ಆನ್‌ಲೈನ್ ಮೂಲಕ ಬುಕ್ ಮಾಡಿದ ಸಿಲಿಂಡರ್‌ಗಳನ್ನು ಕೂಡ ಏಜೆನ್ಸಿಗಳು ನೀಡದೇ ವಂಚಿಸುತ್ತಿವೆ. ವಸ್ತ್ರದ ಭಾರತ ಗ್ಯಾಸ್ ಸಿಲಿಂಡರ್ ಕಚೇರಿಯ ಸಿಬ್ಬಂದಿ ಗ್ರಾಹಕರ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡದೇ ಅವಮಾನಕಾರಿ ವರ್ತನೆ ತೋರಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಲ್.ಪಿ.ಜಿ ದರ ಏರಿಕೆಯಿಂದ ಮಧ್ಯಮ ವರ್ಗ ಮತ್ತು ದುಡಿಯುವ ಜನರಿಗೆ ಹೆಚ್ಚಿನ ಹೊರೆ ಉಂಟಾಗಿದೆ. ಸರ್ಕಾರದ ಕ್ರಮವನ್ನು ನಾವು ಖಂಡಿಸುತ್ತೇವೆ ಎಂದು ಮಹಿಳಾ ಸಮಿತಿ ಅಧ್ಯಕ್ಷೆ ಪರವೀನ್ ಬಾನು ಹವಾಲ್ದಾರ ತಿಳಿಸಿದ್ದಾರೆ.

ಈ ಬಗ್ಗೆ ಜಿಲ್ಲಾಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಕಾಳುಸಂತೆಯಲ್ಲಿ ಗ್ಯಾಸ್ ಸಿಲಿಂಡರ್ ಮಾರಾಟ ಮಾಡುವ ಏಜೆನ್ಸಿಗಳ ಪರವಾನಿಗೆ ರದ್ದು ಮಾಡಬೇಕು ಹಾಗೂ ಸಂಬಂಧಪಟ್ಟ ಮಾಲಿಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸುವುದಾಗಿ ಸ್ಲಂ ಸಮಿತಿಯವರು ಎಚ್ಚರಿಕೆ ನೀಡಿದರು.

ಈ ವೇಳೆ ಇಬ್ರಾಹಿಂ ಮುಲ್ಲಾ, ಶರಣಪ್ಪ ಸೂಡಿ, ಮೌಲಾಸಾಬ್ ಗಚ್ಚಿ, ಮೆಹಬೂಬಸಾಬ್ ಬಳ್ಳಾರಿ, ಪುಷ್ಪಾ ಬಿಜಾಪುರ, ವಿಶಾಲಕ್ಷಿ ಹಿರೇಗೌಡ್ರ, ಮಕ್ತುಮಸಾಬ್ ಮುಲ್ಲಾನವರ, ಶಂಕ್ರಪ್ಪ ರೋಣದ, ಆನಂದಪ್ಪ ಮೂಲಿಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ನೂತನ ಸಿಪಿಐ ಸುಬ್ಬಾಪುರಮಠರಿಗೆ ಕರವೇ ಸನ್ಮಾನ



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆಯ ಮುಳಗುಂದ ಪಟ್ಟಣಕ್ಕೆ ನೂತನವಾಗಿ ಸಿಪಿಐ (ವಲಯ ಪೊಲೀಸ್ ಪರಿಶೀಲಕ) ಆಗಿ ಅಧಿಕಾರ ವಹಿಸಿಕೊಂಡ ಸುಬ್ಬಾಪುರಮಠ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ಗದಗ ಜಿಲ್ಲಾ ಘಟಕದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕರ್ನಾಟಕ ರಕ್ಷಣಾ ವೇದಿಕೆ ಗದಗ ಜಿಲ್ಲಾಧ್ಯಕ್ಷರಾದ ಹನಮಂತಪ್ಪ ಹೆಚ್. ಅಬ್ಬಿಗೇರಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸುಬ್ಬಾಪುರಮಠರಿಗೆ ಹಾರ ಹಾಕಿ ಅಭಿನಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗದಗ ತಾಲೂಕು ಉಪಾಧ್ಯಕ್ಷರಾದ ಹುಸೇನ್ ಕುಂಡಲಿ, ಜಿಲ್ಲಾ ಸಾಮಾಜಿಕ ಜಾಲತಾಣದ ದಾದಾಪೀರ್, ಮುಳಗುಂದ ನಗರ ಘಟಕದ ಅಧ್ಯಕ್ಷ ಹುಸೇನ್ ಅಕ್ಕಿ, ಸಿರಾಜ್ ಹೊಸಮನಿ, ಸುಲೇಮಾನ್ ಸೀತಾಲಹರಿ, ಶಿವಾನಂದ ಬಸವರಾಜ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

## ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಗರಂ

▸▸ ಮೊದಲನೇ ಪುಟದಿಂದ

ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಪಾಟೀಲ ಮಾತನಾಡಿ, ಪೆಟ್ರೋಲ್, ಡೀಸೆಲ್ ಹಾಗೂ ಸಿಲಿಂಡರ್ ದರ ಏರಿಕೆಯಿಂದ ಜನರ ಬದುಕು ದುಸ್ತರಗೊಂಡಿದೆ ಎಂದು ಆರೋಪಿಸಿದರು.

ಗದಗ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಎ. ಅಸೂಟಿ ಮಾತನಾಡಿ, ಕೇಂದ್ರ ಸರ್ಕಾರ ರಾಜ್ಯದ ಕಡೆ ನಿರ್ಲಕ್ಷ್ಯ ತೋರಿಸುತ್ತಿದ್ದು ಜನರಿಗೆ ಅಗತ್ಯವಾದ ಅಡುಗೆ ಅನಿಲ ಪೂರೈಕೆಯಲ್ಲಿಯೂ ವಿಫಲವಾಗಿದೆ ಎಂದು ಹೇಳಿದರು.

ಗದಗ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೀಲಮ್ಮ ಬೋಳನವರ ಮಾತನಾಡಿ, ಸಿಲಿಂಡರ್ ದರ ಏರಿಕೆಯಿಂದ ಮಹಿಳೆಯರು ಸಂಕಷ್ಟ ಅನುಭವಿಸುತ್ತಿದ್ದು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.


ಪ್ರತಿಭಟನೆಯಲ್ಲಿ ಮಹಿಳೆಯರು ಒಲೆ ಹಚ್ಚಿ ಅಡುಗೆ ಮಾಡುವ ಮೂಲಕ ವಿಶಿಷ್ಟವಾಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರವೀಣ ಯಾವಗಲ್ಲ, ಅಶೋಕ ಮಂದಾಲಿ, ಅಕ್ಬರ್ ಸಾಬ್ ಬಬರ್ಚಿ, ಭಾಷಾಸಾಬ್ ಮಲ್ಲಸಮುದ್ರ, ಎಸ್.ಎನ್. ಬಳ್ಳಾರಿ, ವ್ಹಿ.ಬಿ. ಸೋಮನಕಟ್ಟಿಮಠ, ಬಸವರಾಜ ಕಡೇಮನಿ, ಉಮರಫಾರುಕ ಹುಬ್ಬಳ್ಳಿ, ಅಮರೇಶ ಮಾಗಡಿ, ಉಮೇಶ್ ಹೂಗಾರ, ರಮೇಶ್ ಹೊನ್ನಿನಾಯ್ಕರ, ಡಿ.ಡಿ. ಮುರನಾಳ, ಶರಣಪ್ಪ ಬೆಟಗೇರಿ, ವಾಣಿ ಹಿರೇಮಠ, ಸಾವಿತ್ರಿ ಹೂಗಾರ, ದಾಕ್ಷಾಯಿಣಿ ಹಾಸನಕರ್, ಲಲಿತಾ ಗೊಳಗೊಳಕಿ ಸೇರಿದಂತೆ ಹಲವರು

## ಅಡುಗೆ ಗ್ಯಾಸ್ ಕೊರತೆಯ ಹಿಂದೆ ರಾಜ್ಯ ಸರ್ಕಾರದ ಕೈವಾಡ – ಗೋವಿಂದಗೌಡ್ರ ಆರೋಪ

**■ ವಿಜಯಸಾಕ್ಷಿ ಸುದ್ದಿ, ಗದಗ**

ಅಂತಾರಾಷ್ಟ್ರೀಯ ಮಟ್ಟದಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯಿಂದ ಇಂಧನ ಹಾಗೂ ಅಡುಗೆ ಅನಿಲಗಳ ಬೆಲೆ ಏರಿಕೆಯಾಗಿರುವುದು ಸಹಜ. ಆದರೂ ದೇಶದಲ್ಲಿ ಸಮತೋಲನ ಕಾಯ್ದುಕೊಂಡು ಇಂಧನ ಮತ್ತು ಅಡುಗೆ ಅನಿಲ ಪೂರೈಸುತ್ತಿರುವ ಕೇಂದ್ರ ಸರ್ಕಾರದ ಕಾರ್ಯ ಶ್ಲಾಘನೀಯವಾಗಿದೆ ಎಂದು ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಆರ್. ಗೋವಿಂದಗೌಡ್ರ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಮತ್ತು ಅಡುಗೆ ಅನಿಲದ ಬೆಲೆ ಏರಿಕೆಯಿಂದ ದೇಶದಲ್ಲಿಯೂ ಬೆಲೆ ಏರಿಕೆಯಾಗಿದೆ. ಇದನ್ನು ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಅಂತಾರಾಷ್ಟ್ರೀಯ ಸಮಸ್ಯೆಯನ್ನು ರಾಜಕೀಯವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರ ಯತ್ನಿಸುತ್ತಿದೆ ಎಂದು ಟೀಕಿಸಿದರು.

ಹಿಂದೆ ಜಿಎಸ್‌ಟಿ ಕಡಿತಗೊಂಡಾಗ ಅಗತ್ಯ ವಸ್ತುಗಳ ಬೆಲೆ ಇಳಿಸಬೇಕಾಗಿದ್ದ ರಾಜ್ಯ ಸರ್ಕಾರ, ಬದಲಿಗೆ ಹಾಲಿನ ಬೆಲೆಯನ್ನು ಪ್ರತಿ ಲೀಟರ್‌ಗೆ ಒಂದು ರೂಪಾಯಿ ಹಾಗೂ ತುಪ್ಪದ ಬೆಲೆಯನ್ನು ಕಿಲೋಗ್ರಾಂಗೆ 90 ರೂಪಾಯಿ ಹೆಚ್ಚಿಸಿದೆ. ಈಗ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ವಿರುದ್ಧ ಟೀಕೆ ಮಾಡುವುದು ನಾಚಿಕೆಗೇಡಿನ ಸಂಗತಿ ಎಂದು ಅವರು ಆರೋಪಿಸಿದರು.

ರಾಜ್ಯದಲ್ಲಿ ಉಂಟಾಗಿರುವ ಅಡುಗೆ ಗ್ಯಾಸ್ ಕೊರತೆಯ ಹಿಂದೆ ರಾಜ್ಯ ಸರ್ಕಾರದ ಕೈವಾಡ ಇರಬಹುದು ಎಂಬ ಸಂಶಯವೂ ವ್ಯಕ್ತಪಡಿಸಿದರು. ದೇಶದ ಹಲವೆಡೆ ಗ್ಯಾಸ್ ಕೊರತೆ ಕಾಣಿಸದಿದ್ದರೂ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಮಾತ್ರ ಸಮಸ್ಯೆ ಕಾಣಿಸುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಈ ವೇಳೆ ವೀರನಗೌಡ ನಾಡಗೌಡ್ರ, ಬಸವರಾಜ ಅಪ್ಪಣ್ಣವರ, ಜಿ.ಕೆ. ಕೊಳ್ಳಿಮಠ, ಪ್ರಫುಲ್ ಪುಣೆಕರ, ಸಂತೋಷ್ ಪಾಟೀಲ, ಪ್ರಭುರಾಜ್ ಗೌಡ ಪಾಟೀಲ, ಅಭಿಷೇಕ್ ದೇಸಾಯಿ, ಶ್ರೀಮತಿ ಮಂಜುಳಾ ಮೇಟಿ, ರಾಜಣ್ಣ ಸಂಶಿ ಮತ್ತು ಮುತ್ತು ಬಡಿಗೇರ್ ರಾಜ್ಯ ಸರ್ಕಾರದ ನೀತಿಯನ್ನು ಟೀಕಿಸಿದರು.

## ಸಾಹಿತಿ ಡಾ. ವ್ಹಿ. ವ್ಹಿ. ಹಿರೇಮಠರಿಗೆ "ಅಕ್ಷರ ತಾಯಿ" ಬಿರುದು

**■ ವಿಜಯಸಾಕ್ಷಿ ಸುದ್ದಿ, ಗದಗ**

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಚೇತನ್ ಫೌಂಡೇಶನ್ ಕರ್ನಾಟಕ ಹಾಗೂ ವಿಸ್ಮಯವಾಣಿ ದಿನಪತ್ರಿಕೆಯ ಸಹಯೋಗದಲ್ಲಿ ಮಹಿಳಾ ಸಾಹಿತ್ಯ ಸಮ್ಮೇಳನವು ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಭವನದ ಕುವೆಂಪು ಸಭಾಂಗಣದಲ್ಲಿ ಜರುಗಿತು.

ಕಾರ್ಯಕ್ರಮದಲ್ಲಿ ಗದುಗಿನ ಅಶ್ವಿನಿ ಪ್ರಕಾಶನದ ಅಧ್ಯಕ್ಷರು, ಪ್ರಕಾಶಕಿ, ಸಾಹಿತಿ ಹಾಗೂ ಸಂಘಟನೆಕಾರರಾದ ಶ್ರೀಮತಿ ಡಾ. ವ್ಹಿ. ವ್ಹಿ. ಹಿರೇಮಠ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಚೇತನ್ ಫೌಂಡೇಶನ್ ಅಧ್ಯಕ್ಷರಾದ ಚಂದ್ರಶೇಖರ ಮಾಡಲಗೇರಿ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಉದ್ಘಾಟಕರಾಗಿ ಖ್ಯಾತ ರಂಗಭೂಮಿ ಹಾಗೂ ಕಿರುತೆರೆ ಕಲಾವಿದೆಯಾದ ಶ್ರೀಮತಿ ಹೆಲನ್ ಮೈಸೂರ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಶ್ರೀಮಾತಾ ಅಕ್ಕಮಹಾದೇವಿ ಗುರುಮಾತಾಜಿ, ಶ್ರೀಗುರುಮಲ್ಲೇಶ್ವರ ತ್ರಿವಿಧ ದಾಸೋಹ ಸಂಸ್ಥಾನ ಶಾಖಾಮಠ ಸವಳಂಗ (ದಾವಣಗೇರಿ) ಪೀಠಾಧ್ಯಕ್ಷರು ಸಾನಿಧ್ಯ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಖ್ಯಾತ ಹಿನ್ನಲೆ ಗಾಯಕಿ ಹಾಗೂ ಸಂಶೋಧಕರಾದ ಡಾ. ಪ್ರಿಯದರ್ಶಿನಿ (ಬೆಂಗಳೂರು), ಕುಮಾರಿ ದೇವಿಕಾ (ಹುಬ್ಬಳ್ಳಿ), ಶ್ರೀಮತಿ ಪ್ರೇಮಲತಾ ಹಿರೇಮಠ (ಗದಗ) ಮತ್ತು ವಿಸ್ಮಯ ದಿನಪತ್ರಿಕೆಯ ಸಂಪಾದಕರಾದ ಡಾ. ಬಿ. ವಾಸುದೇವ (ದಾವಣಗೇರಿ) ಉಪಸ್ಥಿತರಿದ್ದರು.

ಸಾಹಿತ್ಯ, ಪುಸ್ತಕ ಪ್ರಕಟನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಮಾಜ ಸೇವಾ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಡಾ. ವ್ಹಿ. ವ್ಹಿ. ಹಿರೇಮಠ ಅವರ ಸೇವೆಯನ್ನು ಗಮನಿಸಿ ಮಾರ್ಚ್ 8, 2026 ರಂದು ನಡೆದ ಈ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಅವರಿಗೆ ಗೌರವಪೂರ್ವಕವಾಗಿ "ಅಕ್ಷರ ತಾಯಿ" ಬಿರುದು ನೀಡಿ ಸನ್ಮಾನಿಸಲಾಯಿತು ಎಂದು ಚೇತನ್ ಫೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka